# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

**ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥**

**ಸಂಪುಟ : 34** | **ಅಧಿಕ ಜ್ಯೇಷ್ಠ – June 2007** | **ಸಂಚಿಕೆ : 03**



ಸಂಸ್ಥಾಪನಾ ಪೋಷಕರು : **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು**

ಸಾಮ್ರಾಟ್ ಪೋಷಕರು : **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಹಾಗೂ

**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : **ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : **ರಾಜಾ. ಎಲ್. ಸೂರೀಂದ್ರಾಚಾರ್ಯ**

ಸಂಪಾದಕರು : **ಕಡಪ ರಾಘವೇಂದ್ರಾಚಾರ್ಯ**

ಉಪ-ಸಂಪಾದಕರು : **ಪಿ.ವಿ. ಹರಿನಾಥ್**

ಸಂಪಾದಕ ಮಂಡಳಿ : **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**
**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**
**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**
**ವಿದ್ವಾನ್ ಶ್ರೀ ಗುಂಜಳ್ಳಿ. ನರಹರಿ ಆಚಾರ್ಯ**
**ಶ್ರೀ ಬಿ.ಎ. ಪಾಟೀಲ್**



ಪ್ರಧಾನ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ – 08512-279887 — ಮೊಬೈಲ್ – 099857-03033**

ಬೆಂಗಳೂರು ಶಾಖಾ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ – 9341387714, 9342651516**


## ವಿಷಯಸೂಚೀ


| | | |
|---|---|---|
| ಮಂಗಳಾಚರಣೆ | | ೦೩ |
| ಸಂಪಾದಕೀಯ | | ೦೪ |
| **ಲೇಖನಮಾಲಾ** | | |
| ಗೀತಾವಿವೃತಿ | ಡಾ. ಆರ್.ಜಿ. ಮಾಳಗಿ | ೦೬ |
| ಪುರುಷ ಹೆಣ್ಣಾಗಬಹುದು | ಎನ್.ಆರ್. ದ್ವಾರಕಾನಾಥಾಚಾರ್ಯ | ೧೧ |
| ಗೀತಾಜ್ಞಾನ | ಡಾ. ಪಾಂಡುರಂಗ ಜೋರಾಪುರ | ೧೬ |
| ಆಧುನಿಕರ ದೃಷ್ಟಿಯಲ್ಲಿ ಋಗ್ವೇದಕಾಲೀನ ದೇವತೆಗಳು | ಡಾ. ಕೊರಟಗೆರೆ ವಾಸುದೇವಾಚಾರ್ಯ | ೨೦ |
| ಕೂಡಲಿ ಆರ್ಯ ಅಕ್ಷೋಭ್ಯ ಮಠದ ಶ್ರೀಸುಲಭತೀರ್ಥರ ಬೃಂದಾವನ ಪತ್ತೆ | ಸಂತೇಬೆನ್ನೂರು ಸುಮತೀಂದ್ರ ನಾಡಿಗ್ | ೨೬ |
| ಮಹಾಭಾರತದಲ್ಲಿ ಭೀಷ್ಮರ ಸ್ಥಾನ | ವಿದ್ವಾನ್. ಶ್ರೀ ವಿ. ರಮೇಶಾಚಾರ್ಯ | ೨೯ |
| ಪುತ್ರಸಂತಾನಪ್ರದ ಸೋಮೋತ್ಪತ್ತಿ | ಡಾ. ಎನ್. ವಾದಿರಾಜಾಚಾರ್ಯ | ೩೪ |
| ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ | ಪಂ. ಆನಂದತೀರ್ಥಾಚಾರ್ಯ | ೪೦ |
| ತಮಿಳುನಾಡಿನ ನವಗ್ರಹ ದೇವಾಲಯಗಳು | ಸಂಗ್ರಹ : ಸೂರೀಂದ್ರ | ೪೩ |
| ಇಣುಕುನೋಟ | | ೪೫ |
| ಪರ್ಯಟನೆ | | ೪೮ |


[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

## ಮಂಗಳಾಚರಣೆ

**ಮಾಂ ಚೇನ್ಮುಂಚತಿ ದೇವೋಽಸೌ ಗಾಂ ಚ ಮುಂಚತಿ ವೈದಿಕೀಮ್ ।**
**ಸತ್ಯವ್ರತಸ್ಯ ನಾಸತ್ಯಂ ಭಕ್ತಸ್ಯ ನ ಕದಾಪಿ ಭೀಃ ॥**

ಈ ಸ್ವಾಮಿಯು ನನ್ನನ್ನು ಕೈಬಿಟ್ಟರೆ 'ನನ್ನ ಭಕ್ತನನ್ನು ನಾನು ಎಂದೂ ಕೈಬಿಡುವುದಿಲ್ಲ' ಎಂಬ ವೇದವಾಕ್ಯವನ್ನು ಕೈಬಿಟ್ಟಂತಾಗುತ್ತದೆ. ಸತ್ಯವನ್ನು ಬಿಡುವುದಿಲ್ಲವೆಂಬ ಪ್ರತಿಜ್ಞೆಯುಳ್ಳ ನನ್ನ ದೇವರ ಮಾತು ಎಂದೂ ಅಸತ್ಯವಾಗುವುದಿಲ್ಲ. ಭಕ್ತನಿಗೆ ಎಂದೂ ಭಯವಿಲ್ಲ.

◆ ◆

**ಪ್ರಭೋ ಪ್ರಬೋಧ್ಯ ಬೋಧಾಬ್ಧಿಂ ಪ್ರಬುದ್ಧಬುಧಸಾಧ್ಯ ತೇ ।**
**ಕೃಪಾಕ್ಷಪಾಕರಕರಶ್ಚಕೋರೀಮಿವ ಪಾತು ಮಾಮ್ ॥**

ಅತ್ಯುತ್ತಮವಾದ ಅಪರೋಕ್ಷಜ್ಞಾನವುಳ್ಳ ಜ್ಞಾನಿಗಳಿಂದ ಹೊಂದಲು ಸಾಧ್ಯನಾದ ಪ್ರಭುವೇ, ನಿನ್ನ ಕಲ್ಯಾಣಗುಣಗಳೆಂಬ ಜ್ಞಾನಗಳ ಸಮುದ್ರವನ್ನು ಉಕ್ಕೇರಿಸಿ, ನಿನ್ನ ಕೃಪೆಯ ಚಂದ್ರನ ಕಿರಣವು ಚಕೋರಿಯಂತಿರುವ ನನ್ನನ್ನು ಕಾಪಾಡಲಿ.

### ಶ್ರೀಸುಶಮೀಂದ್ರವಾಣಿ

**ಚೆನ್ನಾಗಿ ಕಾದ ಕಬ್ಬಿಣದ ಮೇಲೆ ಬಿದ್ದ ನೀರಿನ ಹನಿಯು ಹೇಳ ಹೆಸರಿಲ್ಲದೆ ನಾಶವಾಗುತ್ತದೆ. ತಾವರೆಯ ಎಲೆಯ ಮೇಲೆ ಬಿದ್ದ ಹನಿಯು ಮುತ್ತಿನಂತೆ ತೋರುತ್ತದೆ. ಅದೇ ನೀರ ಹನಿಯು ಶುಕ್ತಿ (ಕಪ್ಪೆಚಿಪ್ಪು) ಯಲ್ಲಿ ಬಿದ್ದಾಗ ಹೊಳೆಯುವ ಮುತ್ತೇ ಆಗುತ್ತದೆ.**

**ಮಕ್ಕಳೆ! ಈ ಹೊಸವರ್ಷದಲ್ಲಿ ವಿದ್ಯಾಭ್ಯಾಸ ಮಾಡುವಾಗ ನಿಮ್ಮ ಸ್ನೇಹವು ಉತ್ತಮರ ಜತೆಯಲ್ಲೇ ಆಗಲಿ. ನಿಮ್ಮ ಸ್ನೇಹವನ್ನು ನಾಶಮಾಡುವ, ಸ್ನೇಹಿತರಂತೆ ನಟಿಸುವ ಕಬ್ಬಿಣ, ತಾವರೆ ಎಲೆಯಂತಹವರ ಜೊತೆ ಸ್ನೇಹ ಸೇರದಿರಲಿ, ಬಾಲ್ಯದಲ್ಲಿನ ಉತ್ತಮ ನಡವಳಿಕೆಗಳೇ ನಮ್ಮ ಭವಿಷ್ಯತ್ತನ್ನು ನಿರ್ಧರಿಸುತ್ತವೆ.**



## ಸಂಪಾದಕೀಯ

ಇಂದು ವಿಶ್ವದಲ್ಲಿನ ಆಗು-ಹೋಗುಗಳನ್ನು ನಾವು ತಿಳಿದುಕೊಳ್ಳುವಲ್ಲಿ ಮೀಡಿಯಾ ಪ್ರಮುಖ ಸ್ಥಾನವನ್ನು ಪಡೆಯುತ್ತಿದೆ. ಈ ಮೀಡಿಯಾಗಳ ಪ್ರಭಾವ ಎಷ್ಟಿದೆ ಎಂದರೆ ಒಂದು ಹಸಿ ಸುಳ್ಳನ್ನು ನೂರು ಬಾರಿ ಸತ್ಯವೆಂದು ತೋರಿಸಿದಲ್ಲಿ ಜನರ ಮನದಲ್ಲಿ ಆ ಸುಳ್ಳೇ ಸತ್ಯವಾಗುವ ಸಂಭವವಿದೆ. ದೇಶದಲ್ಲಿ ನಿಷ್ಪಕ್ಷಪಾತವಾಗಿ ಕಾರ್ಯವನ್ನು ನಿರ್ವಹಿಸುತ್ತಾ ಪ್ರಜಾಪ್ರಭುತ್ವದ ಬೇರನ್ನು ದೃಢಪಡಿಸುವ ಬೃಹತ್ ಹೊಣೆ ಮೀಡಿಯಾ ಮೇಲಿದೆ. ಆದರೆ ಇವುಗಳು ಒಮ್ಮೊಮ್ಮೆ ತಮ್ಮ ಜವಾಬ್ದಾರಿ ಏನಿದೆ ಎಂಬುದನ್ನು ಮರೆತಿವೆಯೆ? ಎಂಬಂತೆ ವರ್ತಿಸುತ್ತವೆ. ದೆಹಲಿಯಲ್ಲಿ ಕೊಳವೆ ಬಾವಿಯಲ್ಲಿ ಸಿಲುಕಿದ ಹುಡುಗನೊಬ್ಬನು ಹೊರ ಬರುವವರೆಗಿನ ೬೫ ಗಂಟೆಗಳ ಚಿತ್ರವನ್ನು ದೂರದರ್ಶನದಲ್ಲಿ ನೇರವಾಗಿ ತೋರಿಸುವ ಇವರುಕರ್ನಾಟಕದ ಬಾಲಕನೊಬ್ಬನಿಗೆ ಇದೇ ಪರಿಸ್ಥಿತಿ ಉಂಟಾದಾಗ ಅದರ ಕ್ಲಿಪ್ಪಿಂಗ್ಸ್ ಅನ್ನೂ ತೋರಿಸುವುದಿಲ್ಲ. ದೆಹಲಿಯ ಜೀವಕ್ಕೆ ಬೆಲೆ ಹೆಚ್ಚೆ? ಚಿತ್ರತಾರೆಯರ ವಿವಾಹದ ವರದಿಗಾಗಿ ಮೂರು ದಿನಗಳ ಕಾಲದ ಅಮೂಲ್ಯ ಸಮಯವನ್ನು ಹಾಳುಮಾಡುವ ಇವರಿಗೆ ಈ ಮೂರು ದಿನಗಳಲ್ಲಿ ತೋರಿಸಲೇಬೇಕಾದ ೧೦೦ ಕೋಟಿ ಜನರ ಯಾವುದೇ ಸಮಸ್ಯೆಗಳು ಇರುವುದಿಲ್ಲವೆ? ಹೀಗೆ ಹೇಳುವ ನಮ್ಮ ಉದ್ದೇಶವೇನೆಂದರೆ ಇಂದು ಹಲ್ಲುಜ್ಜುವ ಸಾಧನಗಳ (ಕೋಲ್ಗೇಟ್ ಇತ್ಯಾದಿ), ಸೋಪುಗಳ, ಪಾನೀಯಗಳ ಹೆಸರುಗಳು ಅದನ್ನು ಪ್ರಸ್ತುತಪಡಿಸುವ ಚಿತ್ರತಾರೆಯರ, ಆಟಗಾರರ ಹೆಸರುಗಳು ಎಷ್ಟು ಪ್ರಸಿದ್ಧವಾಗಿವೆ ಎಂದರೆ ಪುಟ್ಟ ಮಕ್ಕಳೂ, ಅವುಗಳ ಅವರುಗಳ ಹೆಸರನ್ನು ಹೇಳಬಲ್ಲರು. ಆದರೆ ಇಷ್ಟೂ ಜನರಿಗೆ 'ಭಗವದ್ಗೀತೆ', 'ಪಾಂಡುರಂಗ', 'ಶ್ರೀಮಧ್ವಾಚಾರ್ಯರು', 'ಸುಭಾಷಿತಗಳು', 'ಪಂಚತಂತ್ರ' ಎಂದರೇನು ಗೊತ್ತೆ? ಖಂಡಿತಾ ಇಲ್ಲ! ಹಾಗಾದರೆ ಈ ಹೆಸರುಗಳನ್ನು ಪ್ರಸಿದ್ಧವನ್ನಾಗಿಸಲು ಮೀಡಿಯಾದವರಿಗೆ ಹಣ ಕಟ್ಟಬೇಕೆ? ನಮ್ಮ ರಾಷ್ಟ್ರದ ಸಂಸ್ಕೃತಿ ಮತ್ತು ಮಹಾತ್ಮರ ಇತಿಹಾಸವನ್ನು ತಿಳಿಸುವಲ್ಲಿ ಇವರದೇನೂ ಬಾಧ್ಯತೆ ಇಲ್ಲವೇ? ಅದರಲ್ಲೂ ಹಿಂದೂಧರ್ಮದ ಪರಿಧಿಯಲ್ಲಿನ ಯಾವುದೇ ಘಟನೆಯನ್ನು ಸಂಶಯದ ದೃಷ್ಟಿಯಿಂದ ನೋಡುವ ಇವರು "ಬಾಬಾ ರಾಮದೇವ್‌ರವರ ಆಯುರ್ವೇದದ ಔಷಧದಲ್ಲಿ ಮಾನವ ಮೂಳೆಗಳ ಮಿಶ್ರಣವಿದೆ" ಎಂದು ಅಪಪ್ರಚಾರ ಮಾಡಿ ಘೋರ ವಿಫಲರಾಗಿ, ಇಂದು ಇದೇ ರಾಮದೇವ್‌ರವರ ಯೋಗ ತರಗತಿಯನ್ನು ನೇರಪ್ರಸಾರದಲ್ಲಿ ತೋರಿಸುತ್ತಾರೆ.


ರಾಮಚಂದ್ರಾಪುರ ಮಠದ ವತಿಯಿಂದ ನಡೆದ 'ವಿಶ್ವ ಗೋ ಸಮ್ಮೇಳನ'ದಲ್ಲಿ ಗೋವಿನ ಮಹತ್ವದ ಬಗ್ಗೆ ಸಾಕಷ್ಟು ತಿಳಿಸಲಾಯಿತು. ಅದಕ್ಕೆ ಸಿಕ್ಕ ಪ್ರಚಾರವೆಷ್ಟು? ಅದರ ತಂಟೆಗೇ ಇವರು ಹೋಗಲಿಲ್ಲ. ಮನೆಯಿಂದ ಓಡಿ ಬಂದ ಪ್ರೇಮಿಗಳ ಚರಿತ್ರೆಯನ್ನು ನೇರವಾಗಿ ತೋರಿಸಿ ಮದುವೆಯ ಪೌರೋಹಿತ್ಯವನ್ನೂ ವಹಿಸಿಕೊಳ್ಳುವ ಮೀಡಿಯಾದವರು ಗೋಮೂತ್ರದಿಂದ ವಿದ್ಯುತ್ ಉತ್ಪಾದಿಸುವುದನ್ನು ಸಂಶೋಧನೆ ಮಾಡಿ ತಿಳಿಸಿದವನಿಗೆ ಪೇಟೆಂಟ್ ಹಕ್ಕು ಸಿಗುವವರೆಗೂ ಶ್ರಮಿಸುವರೆ? ಇಲ್ಲ! **ಹಿಂದೂಧರ್ಮದ ಬೆಂಬಲಿಗರು ಎಂಬ ಪಟ್ಟ ಕಟ್ಟಿಬಿಟ್ಟರೆ? ಎಂಬ ಭಯ. ಹೀಗಾಗಿ ಪಕ್ಷಪಾತರಾಹಿತ್ಯವೆಂಬುದು ಎಲ್ಲಿ ಬಂತು?** ಇವರೆಷ್ಟೇ ಅಪಪ್ರಚಾರ ಮಾಡಿದರೂ ನಮ್ಮ ಸಂಸ್ಕೃತಿಯ ಭಾಸ್ವರ ಕಾಂತಿಯನ್ನು ತಡೆಯಲಾರರು. ಇಂದು ಅಮೆರಿಕನ್ನರು ತಮ್ಮ ತಿಂಡಿ-ತೀರ್ಥಗಳಿಗೆ ಬಿಟ್ಟರೆ ಹೆಚ್ಚು ಹಣ ಖರ್ಚು ಮಾಡುತ್ತಿರುವುದು (ಲಕ್ಷಾಂತರ ಡಾಲರ್‌ಗಳು) ಯೋಗ ತರಗತಿಗಳಿಗೆ ಎಂಬುದು ಇವರಿಗೆ ತಿಳಿದಿರಲಿ.

ಬೇಲಿಯೇ ಎದ್ದು ಹೊಲ ಮೇಯಬಾರದು. ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದಕ್ಕೆ ಸುಣ್ಣ ಹಚ್ಚಬಾರದು.

---

**ವಿಳಾಸ ಬದಲಾವಣೆ ಮಾಡುವವರು ಹೊಸ ವಿಳಾಸ, ಎಲ್.ನಂ. ಜೊತೆಗೆ ಹಳೆಯ ವಿಳಾಸವನ್ನೂ ತಿಳಿಸಬೇಕು. ಇಲ್ಲದಿದ್ದಲ್ಲಿ ವಿಳಾಸ ಬದಲಾವಣೆ ಮಾಡಲಾಗುವುದಿಲ್ಲ.**

## ಖಾಸಗಿ ರಾಯರ ಮಠಗಳಿಗೆ
## ಮಂತ್ರಾಲಯ ಮಠದಿಂದ ಸಹಾಯ



## ಖಾಸಗಿ ರಾಯರ ಮಠಗಳು ಮಂತ್ರಾಲಯ ಮಠದ ವಶಕ್ಕೆ

ಕಲಿಯುಗದ ಕಾಮಧೇನು, ಕಲ್ಪವೃಕ್ಷರೆಂದು ಖ್ಯಾತರಾದ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ೩೩೫ ವರ್ಷಗಳ ಹಿಂದೆ ಸಶರೀರರಾಗಿ ಮಂತ್ರಾಲಯ ಕ್ಷೇತ್ರದಲ್ಲಿ ಬೃಂದಾವನ ಪ್ರವೇಶ ಮಾಡಿದಾಗಿನಿಂದ ಮಂತ್ರಾಲಯದಿಂದ ಮೂಲ ಬೃಂದಾವನದ ಮೃತ್ತಿಕೆಯನ್ನು ಪಡೆದು, ಅನೇಕ ಮೃತ್ತಿಕಾ ಬೃಂದಾವನಗಳು ರಾಷ್ಟ್ರದಾದ್ಯಂತ ನಿರ್ಮಾಣವಾಗಿವೆ. ಅನೇಕ ಮಠಗಳು ಅಭಿವೃದ್ಧಿಯ ಪಥದತ್ತ ಸಾಗಿದ್ದರೆ, ಮತ್ತೆ ಕೆಲವು ಮೃತ್ತಿಕಾ ಬೃಂದಾವನದ ಮಠಗಳನ್ನು ಕಟ್ಟಿದವರು ನಿರ್ವಹಣೆಯನ್ನು ಮಾಡಲಾಗದೆ ಕೈಚೆಲ್ಲಿ ಕುಳಿತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಮಠಗಳವರು ನಮ್ಮನ್ನು ಸಂಪರ್ಕಿಸಿದಲ್ಲಿ ಸಕಲ ವ್ಯವಸ್ಥೆಯನ್ನೂ ಮಾಡಿ, ಮಂತ್ರಾಲಯದ ಆಡಳಿತ ವ್ಯಾಪ್ತಿಗೆ ಅವುಗಳನ್ನು ಪಡೆದು ಅಭಿವೃದ್ಧಿಪಡಿಸಲಾಗುವುದು.

**ರಾಯರ ಹೆಸರಿನಲ್ಲಿ ಪ್ರಾರಂಭವಾದ ಮಠವು ರಾಯರಿಗೇ ಸೇರಬೇಕಲ್ಲವೆ?**

ಸಂಪರ್ಕಿಸಬೇಕಾದ ವಿಳಾಸ

**ಕಾರ್ಯನಿರ್ವಾಹಕ ವ್ಯವಸ್ಥಾಪಕರು**

ನಂ. 4, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಸೀತಾಪತಿ ಅಗ್ರಹಾರ, ಹೊಸತರಗುಪೇಟೆ, ಬೆಂಗಳೂರು - 560 002
**ದೂರವಾಣಿ : 080-26708642**
**ಮೊಬೈಲ್ : 9342651516, 9343798112, 9986991411**






# ಗೀತಾವಿವೃತಿ
## (ಕನ್ನಡಾನುವಾದ)

ಅನುವಾದ : ಪಂಡಿತರತ್ನ, ವಿದ್ಯಾವಾಚಸ್ಪತಿ **ಡಾ. ಆರ್.ಜಿ. ಮಾಳಗಿ**
ನಂ. ೨೬೬/೪, ೩ನೇ ಮುಖ್ಯರಸ್ತೆ, ೬ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು - ೧೯

ಹಿಂದಿನ ಸಂಚಿಕೆಯಿಂದ.......

### ಭಗವದ್ಗೀತೆ - ಅರ್ಜುನ ಉವಾಚ (ಸಂಜಯನ ಮಾತು)

ಏವಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಮ್ ॥ ೨೪ ॥

ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಮ್ ।
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ ॥ ೨೫ ॥

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್ ।
ಆಚಾರ್ಯಾನ್ ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ॥ ೨೬ ॥

ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ।
ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನ್ ಅವಸ್ಥಿತಾನ್ ॥ ೨೭ ॥

ಕೃಪಯಾ ಪರಯಾಽಽವಿಷ್ಟೋ ವಿಷೀದನ್ ಇದಮಬ್ರವೀತ್ ।

**ಅನುವಾದ** - ''ಈ ರೀತಿಯಾಗಿ ಅರ್ಜುನನಿಂದ ಹೇಳಲ್ಪಟ್ಟ (ಪ್ರಾರ್ಥಿಸಲ್ಪಟ್ಟ) ಶ್ರೀಕೃಷ್ಣನು ತನ್ನ ಉತ್ತಮವಾದ ರಥವನ್ನು ಎರಡೂ ಸೈನ್ಯಗಳ ಮಧ್ಯದಲ್ಲಿ, ಭೀಷ್ಮ - ದ್ರೋಣರ ಹಾಗೂ ಇತರ ಎಲ್ಲ ರಾಜರ ಸಮ್ಮುಖದಲ್ಲಿ ತಂದು ನಿಲ್ಲಿಸಿ, 'ಅರ್ಜುನ! ಯುದ್ಧಕ್ಕಾಗಿ ಇಲ್ಲಿ ಸೇರಿರುವ ಈ ಕೌರವರನ್ನು ನೋಡು' ಎಂದನು''. ॥ ೨೪-೨೫ ॥

ಆಗ ಅರ್ಜುನನು ಆ ಎರಡೂ ಸೈನ್ಯದಲ್ಲಿದ್ದ ಪಿತೃಸಮಾನರಾದ ಭೂರಿಶ್ರವ ಮುಂತಾದವರನ್ನೂ, ಭೀಷ್ಮ - ಸೋಮದತ್ತ ಮುಂತಾದ ಪಿತಾಮಹರನ್ನೂ, ಬಾಹ್ಲೀಕನೇ ಮೊದಲಾದ ಪ್ರಪಿತಾಮಹರನ್ನೂ, ದ್ರೋಣರಂಥ ಗುರುಗಳನ್ನೂ, ಶಲ್ಯ - ಶಕುನಿಯೇ ಮುಂತಾದ ಸೋದರಮಾವಂದಿರನ್ನೂ, ಧರ್ಮರಾಜ - ದುರ್ಯೋಧನ ಮುಂತಾದ ಅಣ್ಣತಮ್ಮಂದಿರನ್ನೂ, ಅಭಿಮನ್ಯುವೇ ಮೊದಲಾದ ಮಕ್ಕಳನ್ನೂ, ಘಟೋತ್ಕಚನ

ಮಗನೇ ಮೊದಲಾದ ಮೊಮ್ಮಕ್ಕಳನ್ನೂ, ಕೃಷ್ಣ - ಅಶ್ವತ್ಥಾಮ ಮುಂತಾದ ಸ್ನೇಹಿತರನ್ನೂ, ದ್ರುಪದ ಮುಂತಾದ ಮಾವಂದಿರನ್ನೂ, ವಿರಾಟನಂಥ ಹಿತೈಷಿಗಳನ್ನೂ ನೋಡಿದನು.

ಆ ಅರ್ಜುನನು ತನ್ನ ಮುಂದೆ ನಿಂತಿರುವ ಆ ಎಲ್ಲ ಬಂಧುಗಳನ್ನೂ ಕಣ್ಣಾರೆ ಕಂಡು ಅತಿಯಾದ ಕರುಣೆಯಿಂದ ಆವಿಷ್ಟನಾಗಿ (ಕರುಣೆಯುಳ್ಳವನಾಗಿ) ಮೋಹ-ದಿಂದ ಉಂಟಾದ ಶೋಕದಿಂದ ಮನೋದೌರ್ಬಲ್ಯವನ್ನು ಹೊಂದಿ ಮುಂದೆ ಹೇಳು-ವಂತೆ ಮಾತನಾಡಿದನು. ।। ೨೬-೨೭ ।।

### ಗೀತಾವಿವೃತಿ

**ಏವಂ ಗುಡಾಕೇಶೇನ ಗುಡಾಕಾಯಾಃ = ನಿದ್ರಾಯಾಃ, ಈಶೇನ = ಜಿತನಿದ್ರೇಣ ಅರ್ಜುನೇನೋಕ್ತೋ ಹೃಷೀಕೇಶಃ = ಸರ್ವೇಂದ್ರಿಯಪ್ರೇರಕಃ ಶ್ರೀಕೃಷ್ಣಃ, ಬಲದ್ವಯ-ಮಧ್ಯೇ ಭೀಷ್ಮದ್ರೋಣಪ್ರಮುಖತಃ ಇತಿ ಬುದ್ಧ್ಯಾ ವಿವಿಕ್ತೇನಾನ್ವಯಃ । ರಥಂ ಸ್ಥಾಪಯಿತ್ವಾ ಹೇ ಪಾರ್ಥ! ಸಮವೇತಾನ್ = ಯುದ್ಧಾರ್ಥಂ ಮಿಲಿತಾನ್ ಏತಾನ್ ಕುರೂನ್ ಪಶ್ಯ ಇತ್ಯುವಾಚೇತಿ ।। ೨೪-೨೫ ।।**

**ತತ್ರೇತ್ಯಸ್ಯ ವಿವರಣಂ ಸೇನಯೋರುಭಯೋರಪೀತಿ । ತಥೇತಿ ಸಮುಚ್ಚಯೇ ।। ೨೬ ।।**

**ತಾನ್ ಅವಸ್ಥಿತಾನ್ ಸರ್ವಾನ್ ಬಂಧೂನ್ ಸಮೀಕ್ಷ್ಯೈವ ಇತ್ಯೇವಕಾರೇಣ ಅನ್ವಯಃ । ವಿಷೀದನ್ = ವಿಷಾದಂ ಕುರ್ವನ್ । ವಿಷಾದೋ ನಾಮ ಮೋಹನಿಮಿತ್ತಕಾತ್ ಶೋಕಾತ್ ಯನ್ಮನೋದೌರ್ಬಲ್ಯಂ ಯಸ್ಮಿನ್ ಸತಿ ಸರ್ವವ್ಯಾಪಾರೋಪರಮೋ ಭವತಿ ಸ ಇತಿ ಜ್ಞೇಯಮ್ ।। ೨೭ ।।**

**ಅನುವಾದ –** ಈ ರೀತಿಯಾಗಿ ಗುಡಾಕೇಶನಿಂದ, ಗುಡಾಕಾಯಾಃ = ನಿದ್ರೆಗೆ, ಈಶೇನ = ನಿದ್ರೆಯನ್ನು ಗೆದ್ದಿರುವ ಅರ್ಜುನನಿಂದ ಹೇಳಲ್ಪಟ್ಟ (ಪ್ರಾರ್ಥಿಸಲ್ಪಟ್ಟ), ಹೃಷೀಕೇಶಃ = ಸರ್ವೇಂದ್ರಿಯಪ್ರೇರಕನಾದ ಶ್ರೀಕೃಷ್ಣನು, ಎರಡು ಸೇನೆಗಳ ಮಧ್ಯದಲ್ಲಿ, ಭೀಷ್ಮ-ದ್ರೋಣರಿಗೆ ಅಭಿಮುಖವಾಗಿ ರಥವನ್ನು ನಿಲ್ಲಿಸಿ, ''ಹೇ ಅರ್ಜುನನೇ! ಸಮವೇತಾನ್ = ಯುದ್ಧಕ್ಕಾಗಿ ಬಂದು ಸೇರಿರುವ, ಏತಾನ್ ಕುರೂನ್ = ಈ ಕೌರವರನ್ನು ನೋಡು'' ಎಂದು ಹೇಳಿದನು. ।।೨೪-೨೫ ।।

**ವಿವರಣೆ –** ಎರಡು ಸೈನ್ಯಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸಿ, ಭೀಷ್ಮ - ದ್ರೋಣ ಹಾಗೂ ಇತರ ರಾಜರುಗಳ ಸಮ್ಮುಖದಲ್ಲಿ ರಥವನ್ನು ನಿಲ್ಲಿಸಿ ಎಂಬುದಾಗಿ 'ರಥವನ್ನು ನಿಲ್ಲಿಸಿ' ಎಂಬುದನ್ನು ಎರಡು ಬಾರಿ ಅನ್ವಯಿಸಲಾಗಿದೆ.



ತತ್ರ ಎಂಬುದರ ವಿವರಣೆ ''ಸೇನಯೋರುಭಿಯೋರಪಿ'' ಎಂಬುದಾಗಿ ಎರಡೂ ಸೈನ್ಯದಲ್ಲಿರುವ ಪರಾಕ್ರಮಿಗಳನ್ನು, ಬಂಧುಗಳನ್ನು ಅರ್ಜುನನು ನೋಡಿದನು ಎಂದು ಅರ್ಥ. 'ತಥಾ' ಎಂಬ ಶಬ್ದವು 'ಸಮುಚ್ಚಯ' ಎಂಬ ಅರ್ಥದಲ್ಲಿದೆ. ಇದಕ್ಕೆ ಮೊಮ್ಮಕ್ಕಳನ್ನು ಮತ್ತು ಸ್ನೇಹಿತರನ್ನು ಎಂದು ಅಭಿಪ್ರಾಯ ಮೂಡಬೇಕು. ।।೨೬ ।।

ಯುದ್ಧಕ್ಕೆ ಸನ್ನದ್ಧರಾಗಿ ಬಂದಿರುವ ಆ ಎಲ್ಲ ಬಂಧುಗಳನ್ನು ನೋಡಿದ ಕೂಡಲೇ 'ಏವ' ಎಂಬ ಶಬ್ದವನ್ನು 'ಸಮೀಕ್ಷ್ಯ' ಎಂಬ ಪದದ ಜೊತೆಯಲ್ಲಿ ಅನ್ವಯಿಸಬೇಕು. ನಿಷೀದನ್ = ವಿಷಾದವನ್ನೂ ಮಾಡುವವ (ಮುಂದಿನಂತೆ ನುಡಿದನು). ವಿಷಾದ ಎಂದರೆ ನಮ್ಮವರು ಎಂಬ ಮೋಹದಿಂದಾಗಿ ಬರುವ ದುಃಖದಿಂದ ಉಂಟಾಗುವ ಮನೋದೌರ್ಬಲ್ಯ. ಯಾವ ಮನೋದೌರ್ಬಲ್ಯವಿದ್ದರೆ ಎಲ್ಲ ವ್ಯಾಪಾರಗಳೂ (ಕ್ರಿಯೆಗಳೂ) ಸ್ಥಗಿತವಾಗುತ್ತವೆಯೋ ಅಂಥಹಾ ಮನೋ-ದೌರ್ಬಲ್ಯವೇ ವಿಷಾದ ಶಬ್ದಾರ್ಥ ಎಂದು ತಿಳಿಯಬೇಕು. ।।೨೭ ।।

### ಭಗವದ್ಗೀತೆ – ಅರ್ಜುನ ವಿಷಾದ (ಮಾತು)

**ಅರ್ಜುನ ಉವಾಚ –**

**ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್ ।। ೨೮ ।।**

**ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ।**
**ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ ।। ೨೯ ।।**

**ಅನುವಾದ –** ಅರ್ಜುನನು ಹೇಳಿದನು ''ಹೇ ಕೃಷ್ಣ! ಯುದ್ಧವನ್ನು ಬಯಸಿ ಬಂದು ಸನ್ನದ್ಧರಾಗಿ ನಿಂತಿರುವ ಈ ನನ್ನ ಬಂಧುಜನರನ್ನು ನೋಡಿ, ನನ್ನ ಅಂಗಾಂಗ-ಗಳು ಶಿಥಿಲವಾಗುತ್ತಿವೆ, ಬಾಯಿ ಒಣಗುತ್ತಿದೆ. ಮೈ ನಡುಗುತ್ತಿದೆ. ರೋಮಾಂಚನವೂ ಉಂಟಾಗುತ್ತದೆ''. ।। ೨೮-೨೯ ।।

### ಗೀತಾವಿವೃತಿ

**"ಇದಮಬ್ರವೀದಿತ್ಯುಕ್ತಂ" ಅರ್ಜುನವಾಕ್ಯಮಾಹ – ದೃಷ್ಟ್ವೇತ್ಯಾದಿನಾ ಅಧ್ಯಾಯ ಸಮಾಪ್ತೇಃ । ಹೇ ಕೃಷ್ಣ! ಸಕಲಲೋಕಕರ್ಷಕ । ತದುಕ್ತಂ ಗೀತಾಭಾಷ್ಯೇ ಪಂಚಮೇ ಅಧ್ಯಾಯೇ । ನಿಯಮನಾದಿನಾ ಸಕಲಲೋಕಕರ್ಷಣಾತ್ ಕೃಷ್ಣಃ । ತಚ್ಚೋಕ್ತಮ್ ।।**

**"ಯತಃ ಕರ್ಷಣೇ ದೇವೇಶ ನಿಯಮ್ಯ ಸಕಲಂ ಜಗತ್ ।**
**ಅತೋ ವದಂತಿ ಮುನಯಃ ಕೃಷ್ಣ ತ್ವಾಂ ಬ್ರಹ್ಮವಾದಿನಃ" ।। ಇತಿ ಮಹಾಕೌರ್ಮೇ ಇತ್ಯುಕ್ತೇಃ ।**

**ಯುಯುತ್ಸುಂ ಯೋದ್ಧುಮಿಚ್ಛಂತಂ ಸಮ್ಯಗವಸ್ಥಿತಂ ಇಮಂ ಬಂಧುಜನಂ ದೃಷ್ಟ್ವಾ, ಮಮ ಗಾತ್ರಾಣಿ = ಹಸ್ತಾದ್ಯವಯವಾಃ, ಸೀದಂತಿ, ವಿಶೀರ್ಯಂತೇ ( ಷದ್ಲೃ ) ಷದ್ಲೃವಿಶರಣ-ಗತ್ಯವಸಾದನೇಷು ಇತಿ ಧಾತೋಃ । ಮುಖೇ ಮ್ಲಾನತಾ ಚ ಜಾಯತೇ ॥ ೨೮ ॥**

**ಶರೀರೇ ಕಂಪೋ ರೋಮಾಂಚಶ್ಚ ಜಾಯತೇ ॥ ೨೯ ॥**

**ಅನುವಾದ** – ''ಅರ್ಜುನನು ಈ ಮಾತನ್ನು ಹೇಳಿದನು'' ಎಂದು ಹೇಳಲಾಗಿದೆ. ಅರ್ಜುನನ ಆ ಮಾತನ್ನು ದೃಷ್ಟ್ವಾ ಎಂಬ ಶ್ಲೋಕದಿಂದ ಆರಂಭಿಸಿ, ಮೊದಲನೆಯ ಅಧ್ಯಾಯವು ಮುಗಿಯುವವರೆಗೆ ಹೇಳುತ್ತಾರೆ - ''ಹೇ ಕೃಷ್ಣ, ಎಲ್ಲರನ್ನೂ ಆಕರ್ಷಿಸುವವನೇ!'' ಕೃಷ್ಣ ಶಬ್ದಕ್ಕೆ 'ಲೋಕಕರ್ಷಕ' ಎಂಬ ಅರ್ಥವನ್ನು ಶ್ರೀಮಧ್ವಾಚಾರ್ಯರು ಗೀತಾಭಾಷ್ಯದ ಐದನೆಯ ಅಧ್ಯಾಯದಲ್ಲಿ ''ಭಗವಂತನು ಪ್ರಪಂಚಕ್ಕೆ ನಿಯಮನ ಜ್ಞಾನಾಜ್ಞಾನ ಬಂಧಮೋಕ್ಷಗಳನ್ನು ಕೊಡುವುದರ ಮೂಲಕ ಎಲ್ಲರ ನಿಯಾಮಕನಾದುದರಿಂದ ಎಲ್ಲರನ್ನೂ ಆಕರ್ಷಿಸುವುದರಿಂದ ಕೃಷ್ಣನೆನಿಸಿದ್ದಾನೆ'' ಎಂದು ಹೇಳಿ ಈ ವಿಷಯದಲ್ಲಿ ಮಹಾಕೌರ್ಮಪುರಾಣವನ್ನು ಪ್ರಮಾಣವನ್ನಾಗಿ ಉದಾಹರಿಸಿದ್ದಾರೆ. ''ದೇವತೆಗಳಿಗೆ ಒಡೆಯನಾದ ಭಗವಂತನೇ! ನೀನು ಎಲ್ಲ ಪ್ರಪಂಚವನ್ನು ನಿಯಮಿಸಿ (ನಿಯಂತ್ರಿಸಿ) ಎಲ್ಲರನ್ನೂ ಆಕರ್ಷಿಸುವವನಾಗಿರುವಿ. ಆದ್ದರಿಂದ ಬ್ರಹ್ಮಾದಿಗಳೆನಿಸಿದ ಜ್ಞಾನಿಗಳು (ಮುನಿಗಳು) ನಿನ್ನನ್ನು ''ಕೃಷ್ಣ'' ಎಂಬುದಾಗಿ ಕರೆಯುತ್ತಾರೆ (ಹೇಳುತ್ತಾರೆ) ಎಂದು ಮಹಾಕೌರ್ಮದಲ್ಲಿ ಹೇಳಲಾಗಿದೆ.''

ಯುಯುತ್ಸುಂ = ಯುದ್ಧಮಾಡುವ ಇಚ್ಛೆಯಿಂದ, ಸಮ್ಯಕ್ ಅದಸ್ಥಿತಂ = ಚೆನ್ನಾಗಿ ಬಂದು ಸೇರಿರುವ ಈ ಬಂಧುಜನರ ಸಮೂಹವನ್ನು ನೋಡಿ, ಮಮ = ನನ್ನ, ಗಾತ್ರಾಣಿ = ಹಸ್ತ, ಪಾದ ಮುಂತಾದ ಅವಯವಗಳು, ಸೀದಂತಿ = ಶಿಥಿಲವಾಗುತ್ತಿವೆ. ''ಸೀದಂತಿ'' ಎಂಬ ರೂಪವು ''ಷದ್ಲೃವಿಶರಣಗತ್ಯವಸಾದನೇಷು'' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಮುಖೇ = ಮುಖದಲ್ಲಿ ಮ್ಲಾನತೆಯು (ಬಾಡುವಿಕೆಯು ಉಂಟಾಗುತ್ತಿದೆ, ಮುಖವು ಬಾಡುತ್ತಿದೆ). ॥ ೨೮ ॥

**ವಿವರಣೆ** – ''ಸಮುಪಸ್ಥಿತಮ್'' ಎಂಬುದು ಪ್ರಚಲಿತ ಪಾಠ. 'ಸಮವಸ್ಥಿತಂ' ಎಂಬುದು ಗೀತಾವಿವೃತಿಕಾರರಿಗೆ ಸಮ್ಮತವಾದ ಪಾಠ. ಸಾಮಾನ್ಯವಾಗಿ ಎರಡೂ ಶಬ್ದಗಳಿಗೆ ಅರ್ಥ ಒಂದೇ ಆಗುತ್ತದೆ. ॥೨೮॥

ಶರೀರದಲ್ಲಿ ಕಂಪನವು, ರೋಮಾಂಚನವು ಉಂಟಾಗುತ್ತಿದೆ. ॥೨೯॥





**ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ ।**
**ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ ॥ ೩೦ ॥**

**ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ।**
**ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ॥ ೩೧ ॥**

**ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ।**
**ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈಃ ಜೀವಿತೇನ ವಾ ॥ ೩೨ ॥**

**ಅನುವಾದ** – ''ಗಾಂಢೀವ, ಧನುಸ್ಸು ನನ್ನ ಕೈಯಿಂದ ಜಾರುತ್ತಿದೆ. ಚರ್ಮವು ಸುಡುತ್ತಲೇ ಇದೆ. ನಿಲ್ಲುವುದಕ್ಕೂ ತ್ರಾಣವಿಲ್ಲದವನಾಗಿದ್ದೇನೆ ಬುದ್ಧಿಯು ಭ್ರಮಣೆಯಾದಂತೆ ಭಾಸವಾಗುತ್ತಿದೆ''. ॥ ೩೦ ॥

ಕೇಶವನೇ! ಅಪಶಕುನಗಳನ್ನು ಕಾಣುತ್ತಿದ್ದೇನೆ. ಯುದ್ಧದಲ್ಲಿ ಬಂಧುಸಮೂಹವನ್ನು ಕೊಂದು ನಾನು ಪಡೆಯಬೇಕಾದ ಶ್ರೇಯಸ್ಸನ್ನೂ ನಾಕಾಣೆ. ॥ ೩೧ ॥

ಕೃಷ್ಣನೇ! ನಾನು ಯುದ್ಧದಲ್ಲಿ ಜಯವನ್ನು ಅಪೇಕ್ಷಿಸುವುದಿಲ್ಲ. ರಾಜ್ಯವನ್ನೂ ರಾಜ್ಯದಿಂದ ಉಂಟಾಗುವ ಸುಖವನ್ನೂ (ನಾನು) ಅಪೇಕ್ಷಿಸುವುದಿಲ್ಲ. ಗೋವಿಂದನೇ! ನಮಗೆ ರಾಜ್ಯದಿಂದ ಏನು ಸುಖ? ಸುಖಭೋಗಗಳಿಂದಾಗಲೀ ಬದುಕಿನಿಂದಾಗಲೀ ಏನು ಪ್ರಯೋಜನ? (ಏನು ಸುಖ?) ॥ ೩೨ ॥

**(ಮುಂದುವರೆಯುವುದು)**

## ಸಂದೀಪನ ಕುಟುಂಬಕ್ಕೆ ಶ್ರೀಮಠದಿಂದ ಸಹಾಯ

ನೀರಮಾನ್ವಿಯ ಕೊಳವೆ ಬಾವಿಯಲ್ಲಿ ಬಿದ್ದು ಅಸುನೀಗಿದ 'ಸಂದೀಪ' ಎಂಬ ಬಾಲಕನ ಕುಟುಂಬಕ್ಕೆ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠವು ಇಪ್ಪತ್ತು ಸಹಸ್ರ ರೂಪಾಯಿಗಳ ಪರಿಹಾರವನ್ನು ನೀಡಿದೆ. ಪೀಠಾಧಿಪತಿಗಳಾದ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಈ ಹುಡುಗನ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ತಂದೆ-ತಾಯಿಗಳಿಗೆ ಈ ಹುಡುಗನ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಶ್ರೀರಾಯರಲ್ಲಿ ಪ್ರಾರ್ಥಿಸಿ, ಈ ಪರಿಹಾರದ ಹಣವನ್ನು ತಮ್ಮ ಆಪ್ತಕಾರ್ಯದರ್ಶಿಗಳಾದ ರಾಜಾ. ಎಸ್. ರಾಜಗೋಪಾಲಾಚಾರ್ಯರ ದ್ವಾರಾ ಅವರ ಕುಟುಂಬಕ್ಕೆ ನೀಡುವ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಲೇಖನಾಂಕ

# ಪುರುಷ ಹೆಣ್ಣಾಗಬಹುದು !

■ ವಿದ್ವಾನ್ ಶ್ರೀ ಎನ್.ಆರ್. ದ್ವಾರಕಾನಾಥಾಚಾರ್ಯ

ಎಸ್.ಜಿ.ಎಸ್. ವಿದ್ಯಾಪೀಠ, ಮಂತ್ರಾಲಯ - ೫೧೮ ೩೪೫, ಎ.ಪಿ.

ಶ್ರೀಮನ್ನಾರಾಯಣನು ದ್ವಾಪರಯುಗದ ಶ್ರೀವೇದವ್ಯಾಸ ರೂಪದಿಂದ ಅವತಾರಮಾಡಿ ''ಪಂಚಮವೇದ''ವೆಂದು ಪ್ರಸಿದ್ಧವಾದ ಮಹಾಭಾರತವೆಂಬ ಗ್ರಂಥವನ್ನು ರಚನೆಮಾಡಿರುತ್ತಾರೆ. ಇಂತಹ ಮಹಾಭಾರತ ಗ್ರಂಥವು ೧೮ ಪರ್ವಗಳಿಂದ ಕೂಡಿದ್ದಾಗಿದೆ. ಈ ಮಹಾಭಾರತದ ಭೀಷ್ಮಪರ್ವದಲ್ಲಿ ಭಗವದ್ಗೀತೆ-ಯನ್ನು ಶ್ರೀಕೃಷ್ಣಪರಮಾತ್ಮನು ಅರ್ಜುನನ್ನು ನಿಮಿತ್ತಮಾಡಿಕೊಂಡು ಸಮಸ್ತ ಲೋಕಕ್ಕೆ ತಿಳಿಸಿದ್ದಾನೆ. ಇಂತಹ ಗೀತೆಯ ಮಹತ್ವವು ಪ್ರಪಂಚದ ಎಲ್ಲೆಡೆ ಹಬ್ಬಿದೆ. ಭಗವದ್ಗೀತೆಯ ಮೇಲೆ ರಚಿತವಾಗಿರುವಷ್ಟು ವಿಪುಲ ಸಾಹಿತ್ಯ ಜಗತ್ತಿನ ಬೇರೆ ಯಾವ ಒಂದು ಕೃತಿಯ ಮೇಲೂ ರಚಿತವಾಗಿಲ್ಲವೆನ್ನಬಹುದು. ಗೀತೆಯ ಮೇಲಿನ ವಿಭಿನ್ನವಾದ ವಿವಿಧ ವ್ಯಾಖ್ಯಾನಗಳು ರಚಿತವಾಗಲು ಇದರ ಮಹತ್ತ್ವ ಒಂದು ಕಾರಣವೆಂದರೆ ಇದರ ಅರ್ಥಸಂಕೀರ್ಣತೆ ಮತ್ತೊಂದು ಕಾರಣವಾಗಿದೆ.

ಮಹಾಭಾರತವು ಅರ್ಥವೈಶಾಲ್ಯತೆಯಲಿಲ್ಲ ವೇದಗಳಿಗಿಂತ ಮಿಗಿಲಾದುದು ಭಗವದ್ಗೀತೆ ಅದರ ಉಪನಿಷತ್ತು. ಆದ್ದರಿಂದ ಅದು ಇತರ ಉಪನಿಷತ್ತಿಗಿಂತ ಮಿಗಿಲಾದುದು. ಗೀತೆಯ ವಯಸ್ಸು ೫ ಸಾವಿರ ವರ್ಷವನ್ನು ಮೀರುತ್ತದೆ. ಆದರೆ ಅದರ ತತ್ತ್ವ ಮಾತ್ರ ನಿತ್ಯನೂತನ. ಮಾನವರು ಇರುವವರೆಗೂ ಅದು ಇದ್ದೇ ಇರುತ್ತದೆ. ಅದು ಇಲ್ಲವಾದಾಗ ಮಾನವರ ಬದುಕು ಇಲ್ಲವಾಗುತ್ತದೆ. ಇಂತಹ ಭಗವದ್ಗೀತೆಯಂತಹ ಶಾಸ್ತ್ರವನ್ನು ತಿಳಿಯಬೇಕಾದರೆ ಅರ್ಜುನನಂತೆ ಶಿಷ್ಯನಾಗಿ ಗುರುಗಳ ಬಳಿ ವಿನಯದಿಂದ ಶ್ರವಣಮಾಡಿದಾಗ ತತ್ತ್ವವು ತಿಳಿಯುವುದು. ಇಂತಹ ಭಗವದ್ಗೀತೆಯ ೯ನೇ ಅಧ್ಯಾಯದಲ್ಲಿ ಈ ಶ್ಲೋಕಗಳು ಈ ರೀತಿಯಾದ ಅರ್ಥವನ್ನು ತಿಳಿಸುತ್ತವೆ -

**ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।**
**ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥**

''ಹೇ ಅರ್ಜುನ, ಸ್ವಭಾವತಃ ಉತ್ತಮ ವರ್ಣದವರಾಗಿದ್ದರೂ ಮಾಡಿದ ಪಾಪಕೃತ್ಯಗಳ ನಿಮಿತ್ತದಿಂದ ಅಧಮಜಾತಿಯಲ್ಲಿ ಹುಟ್ಟಿ ಬಂದವರು, ಸ್ತ್ರೀಯರು,



ವೈಶ್ಯರು, ಶೂದ್ರರಾಗಿ (ಶಾಪಾದಿಕಾರಣಗಳಿಂದ) ಜನ್ಮತಾಳಿ ಬಂದವರು. ಇಂಥವ-ರೆಲ್ಲರೂ ನನ್ನನ್ನು ಆಶ್ರಯಿಸಿ, ನನ್ನನ್ನು ಆರಾಧಿಸಿ, ನನ್ನಲ್ಲಿ ಭಕ್ತಿಯುಕ್ತರಾಗಿ ಮುಕ್ತಿರೂಪವಾದ ಅತ್ಯುತ್ತಮ ಸದ್ಗತಿಯನ್ನು ಹೊಂದುತ್ತಾರೆ, ಹೀಗಿರಲು ನನ್ನ ಏಕಾಂತ ಭಕ್ತರಿಗೆ ಮುಕ್ತಿ ದೊರೆಯುವುದರಲ್ಲಿ ಏನು ಆಶ್ಚರ್ಯ? ಆದ್ದರಿಂದ ಶಾಪಾದಿ ನಿಮಿತ್ತದಿಂದ ಸ್ತ್ರೀಯಾಗುವಿಕೆ ಒಂದು ಬಗೆಯಾದರೆ ಅಂತಹ ಸ್ತ್ರೀಯು ಎಂದೆಂದಿಗೂ ಪುರುಷನಾಗುವುದಿಲ್ಲ. ಒಂದು ನಿಮಿತ್ತದಿಂದ ಪುರುಷನಾಗುವುದು ಇಲ್ಲದ್ದರಿಂದ ಈ ರೀತಿ ಹೇಳಿದ್ದಾರೆ.

**ಯಾತಿ ಸ್ತ್ರೀತ್ವಂ ಪುಮಾಂಸೋಽಪಿ ಪಾಪತಃ ಕಾಮತೋಽಪಿವಾ ।**
**ನ ಸ್ತ್ರಿಯೋ ಯಾತಿ ಪುಂಸ್ತ್ವಂತು ಸ್ವಭಾವಾದೇವ ಯಾಃ ಸ್ತ್ರಿಯಃ ॥**

ಪಾಪದ ಇಲ್ಲವೇ ಕಾಮದ ನಿಮಿತ್ತದಿಂದ, ಗಂಡು - ಹೆಣ್ಣಿನ ದೇಹ ಪಡೆಯ-ಬಹುದು. ಆದರೆ ಸ್ವರೂಪತಃ ಸ್ತ್ರೀಯರಾದವರು ಪುರುಷದೇಹವನ್ನು ಎಂದಿಗೂ ಪಡೆಯಲಾರರು. ಈ ವಿಷಯದ ಅಂಗವಾಗಿ ಒಂದು ಆಖ್ಯಾಯಿಕ ಈ ರೀತಿಯಾಗಿದೆ. ದ್ರುಪದ ಮಹಾರಾಜನು ರುದ್ರದೇವರಲ್ಲಿ ತಪಸ್ಸು ಮಾಡಿ ಗಂಡುಮಗುವನ್ನು ಅಪೇಕ್ಷಿಸಿದಾಗ ರುದ್ರದೇವರು ಆ ಮಗುವು ಮೊದಲು ಸ್ತ್ರೀಯಾಗಿ ಹುಟ್ಟಿ ಮತ್ತೆ ಪುರುಷನಾಗುತ್ತದೆಂದು ವರಕೊಟ್ಟರು. ಆ ಧೈರ್ಯದಿಂದ, ರುದ್ರದೇವರ ವರಬಲ-ದಿಂದ ಹುಟ್ಟಿದ ಹೆಣ್ಣುಕೂಸನ್ನು ಪುರುಷವೇಷದಿಂದ ಅಲಂಕರಿಸುತ್ತ ಬೆಳೆಸಿದನು. ಯೌವನಾವಸ್ಥೆಯಲ್ಲಿ ದಶಾರ್ಣಾಧಿಪತಿಯ ಮಗಳೊಂದಿಗೆ ವಿವಾಹ ಮಾಡಿದನು. ಇನ್ನೂ ಆ ಕೂಸು ಹೆಣ್ಣೇ ಆಗಿತ್ತು. ದಶಾರ್ಣಾಧಿಪತಿಯು ಈ ದ್ರುಪದರಾಜನ ಅನ್ಯಾಯ ಕಥೆಯನ್ನು ತಿಳಿದು ಅದನ್ನು ಸ್ಪಷ್ಟ ಪರೀಕ್ಷಿಸಿ ಅದಕ್ಕೆ ಸರಿಯಾದ ಶಿಕ್ಷೆಯನ್ನು ಕೊಡಬೇಕೆಂದು ಉದ್ಯುಕ್ತನಾದನು. ಆಗ ಆ ದ್ರುಪದರಾಜನು ಬಹಳ ಚಿಂತಾಕ್ರಾಂತ-ನಾದನು. ಆಗ ತಂದೆಯ ಚಿಂತೆಯನ್ನು ನೋಡಿ ಆ ಹುಡುಗಿಯು ಮನೆಯಿಂದ ಹೊರಟೇಬಿಟ್ಟಿತು. ಅರಣ್ಯದಲ್ಲಿ ಹೋಗುತ್ತಿರುವಾಗ ''ತುಂಬುರ'' ಎಂಬ ಗಂಧರ್ವನು ಸಿಕ್ಕಿದನು. ಅವನಲ್ಲಿ ಈ ದುಃಖವನ್ನು ಹೇಳಿಕೊಂಡಾಗ ಅವನು ಕೃಪಾವಶನಾಗಿ ತನ್ನ ಪುರುಷದೇಹವನ್ನು ಆ ಸ್ತ್ರೀಗೆ ಕೊಟ್ಟು ಅವಳ ಸ್ತ್ರೀದೇಹವನ್ನು ತಾನು ಸ್ವೀಕರಿಸಿದನು. ಸ್ತ್ರೀದೇಹದಿಂದ ತುಂಬುರನು ಅರಣ್ಯದಲ್ಲಿ ವಾಸಮಾಡುತ್ತಿರುವಾಗ, ಗಂಧರ್ವಾಧಿಪತಿ-ಯಾದ ಕುಬೇರನು ಆ ಸ್ಥಳಕ್ಕೆ ಬಂದನು. ಸ್ತ್ರೀದೇಹವುಳ್ಳ ತುಂಬುರನೆಂಬ ಗಂಧರ್ವನು ಲಜ್ಜೆಯಿಂದ ಪೊದರುಗಳಲ್ಲಿ ಅಡಗಿಕೊಂಡು ಕುಳಿತುಕೊಂಡಿರುವಾಗ, ಕುಬೇರನು ಅದನ್ನು ನೋಡಿ ''ನೀನು ಈ ಸ್ತ್ರೀದೇಹವನ್ನೇ ಧರಿಸಿಕೊಂಡಿರು. ಮಹಾಭಾರತದ ಯುದ್ಧ ಮುಗಿಯುವ ತನಕ ನಿನಗೆ ಇದೇ ಗತಿಯಾಗಲಿ'' ಎಂದು ಶಾಪಕೊಟ್ಟು

ಹೋದನು. ದ್ರುಪದರಾಜನ ಮಗಳು ಗಂಧರ್ವ ದೇಹವನ್ನು ಸ್ವೀಕರಿಸಿದ ಕೂಡಲೇ ಮನೆಗೆ ಹೋದಾಗ ಅಲ್ಲಿ ದಶಾರ್ಣಾಧಿಪತಿಯಾದ ರಾಜನು ಪರೀಕ್ಷೆಗಾಗಿ ಬಂದಿದ್ದನು. ಆಗ ದ್ರುಪದರಾಜನ ಮಗಳು ಗಂಡು ಆದದ್ದನ್ನು ನೋಡಿ ಆಶ್ಚರ್ಯವಾಗಿ ಮರಳಿ ಹೋದನು. ಈ ದ್ರುಪದರಾಜನ ಮಗಳು ತಿರುಗಿ ಈ ದೇಹವನ್ನು ತುಂಬರನಿಗೆ ಕೊಡಲಿಕ್ಕಾಗಿ ತುಂಬರನ ಸಮೀಪಕ್ಕೆ ಹೋಗುವಾಗ ತುಂಬರ ಹೇಳುತ್ತಾನೆ - ''ನನಗೆ ಕುಬೇರನ ಶಾಪವಿದೆ. ಈಗಲೇ ದೇಹವನ್ನು ವಾಪಸ್ಸು ತೆಗೆದುಕೊಳ್ಳಲು ಸಾಧ್ಯವಿಲ್ಲ'' ಎಂದು ಹೇಳಿದಾಗ ದ್ರುಪದರಾಜನ ಮಗಳು ಸಂತುಷ್ಟಳಾಗಿ ಆ ಪುರುಷದೇಹ-ದಿಂದಲೇ ತನ್ನ ಮನೆಗೆ ಹೋಗುತ್ತಾಳೆ. ಅಲ್ಲಿ ತಂದೆ-ತಾಯಿಗಳು ಬಹಳ ಸಂತೋಷ-ಪಟ್ಟರು.

ಇಲ್ಲಿ ಸ್ತ್ರೀಗೆ ಪುರುಷದೇಹ ಬಂದುದು ಕಾಣುತ್ತದೆ. ಆದರೂ ಈ ಸ್ತ್ರೀದೇಹದಲ್ಲಿ ತುಂಬುರ ಎಂಬ ಗಂಧರ್ವನ ಅಂಶ ಇದ್ದುದರಿಂದ ಅದು ಯುಕ್ತವಾಯಿತು. ಪುರುಷನ ಅಂಶವೇ ಇಲ್ಲದೆ ಕೇವಲ ಸ್ತ್ರೀ ಜೀವಿಯು ಪುರುಷದೇಹವನ್ನು ಹೊಂದಲಾರಳು ಎಂದು ಶ್ರೀಕೃಷ್ಣನ ಅಭಿಪ್ರಾಯ. ಆದುದರಿಂದ ''ಪುರುಷರು ಸ್ತ್ರೀಯರಾದಾಗ'' ಎಂದು ಕೃಷ್ಣನು ಹೇಳಿದ್ದಾನೆ, ''ಸ್ತ್ರೀಯರು ಪುರುಷರಾದಾಗ'' ಎಂದು ಹೇಳಲಿಲ್ಲ. ಪುರುಷರು ಸ್ತ್ರೀದೇಹವನ್ನು ಹೊಂದಿದರೂ ಆ ಕರ್ಮ ನಾಶವಾದ ಗತಿಗೆ ಪುನಃ ಪುರುಷದೇಹವನ್ನೇ ಸ್ವೀಕರಿಸುತ್ತಾರೆ.

ಈ ವಿಷಯದಲ್ಲಿ ಭಗವದ್ಗೀತೆಗೆ ವ್ಯಾಖ್ಯಾನ ಬರೆದ ಮಂತ್ರಾಲಯದ ಶ್ರೀರಾಘವೇಂದ್ರತೀರ್ಥರು ಗೀತಾರ್ಥಸಂಗ್ರಹದಲ್ಲಿ ಈ ಪದ್ಯಕ್ಕೆ ವ್ಯಾಖ್ಯಾನ ಮಾಡುವಾಗ ಸ್ತ್ರೀಯರು, ವೈಶ್ಯರು, ಶೂದ್ರರಾಗಿ ಜನ್ಮತಾಳಿ (ಶಾಪಾದಿಕಾರಣಗಳಿಂದ) ಬಂದವರು. ಉದಾಹರಣೆಯಾಗಿ, ಶ್ರೀಮದ್ಭಾಗವತದ ನವಮಸ್ಕಂಧದ ಒಂದನೇ ಅಧ್ಯಾಯದ ಸುಧ್ಯುಮ್ನನ ಕಥೆಯನ್ನು ಹೇಳುವ ಮೂಲಕ ಪುರುಷರು ಸ್ತ್ರೀಯರಾಗಬಹುದಾಗಲಿ ಸ್ತ್ರೀಯರು ಪುರುಷರಾಗಲಾರರೆಂಬುದನ್ನು ಹೇಳಿದ್ದಾರೆ.

''ಕಲ್ಪದ ಆದಿಯಲ್ಲಿ ಶ್ರೀಮನ್ನಾರಾಯಣನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನು. ಬ್ರಹ್ಮನ ಮಾನಸಪುತ್ರ ಮರೀಚಿಯಿಂದ ಕಶ್ಯಪರು, ಅದಿತಿ-ಕಶ್ಯಪರಲ್ಲಿ ವಿವಸ್ವಾನನ ಜನ್ಮವಾಯಿತು. ಅವನ ಎರಡನೆಯ ಹೆಸರು ವೈವಸ್ವತನೆಂದಿತ್ತು. ಅವನಿಗೆ ಸಂತಾನವಾಗಲಿಲ್ಲ. ಆಗ ಗುರುಗಳಾದ ವಶಿಷ್ಠರು ಅವನ ಕಡೆಯಿಂದ ಪುತ್ರಕಾಮೇಷ್ಠಿ ಯಜ್ಞವನ್ನು ಮಾಡಿಸಿದರು. ವೈವಸ್ವತ ಮನುವಿನ ಹೆಂಡತಿ ಶ್ರದ್ಧೆಯು ಯಜ್ಞದೀಕ್ಷೆ ಸ್ವೀಕರಿಸಿ ಕೇವಲ ಹಾಲು ಕುಡಿದೇ ಇರುತ್ತಿದ್ದಳು. ಯಜ್ಞಕಾಲಕ್ಕೆ ಅವಳು



ಹೋತೃವಿನ ಹತ್ತಿರ ಹೋಗಿ ತನಗೆ ಕನ್ನಿಕೆಯಾಗುವಂತೆ ಮಂತ್ರಾಹುತಿ ಹಾಕಿರಿ ಎಂದು ಗುಪ್ತವಾಗಿ ಹೇಳಿದಳು. ಹೋತಾರನು ಅದಕ್ಕೆ ಒಪ್ಪಿ ಅಧ್ವರ್ಯುವು ಆಹುತಿ ಹಾಕಲು ಹೇಳಲು ಹೋತೃವು ಕನ್ಯೆಯ ಧ್ಯಾನಮಾಡಿ ಆಹುತಿ ಹಾಕಿದನು. ಅದರ ಫಲವಾಗಿ ಯಜ್ಞಕುಂಡದಿಂದ ಸರ್ವಾಂಗಸುಂದರಳಾದ ಕನ್ನಿಕೆಯು ಉತ್ಪನ್ನಳಾದಳು. ಅವಳಿಗೆ 'ಇಲಾ ' ಎಂದು ಹೆಸರಿಟ್ಟರು. ಇದರಿಂದ ಮನುವಿಗೆ ಸಂತೋಷವಾಗಲಿಲ್ಲ. ಅವನು ತನಗೆ ಮಗನಾಗಬೇಕೆಂದು ಸಂಕಲ್ಪ ಮಾಡಿದ್ದರಿಂದ ಕನ್ಯೆ ಹೇಗಾದಳೆಂದು ವಶಿಷ್ಠರನ್ನು ಕೇಳಿದನು. ಅವರು ಧ್ಯಾನದ್ವಾರ ತಿಳಿದು ಹೇಳಿದರು - ''ಹೋತೃವಿನ ವಿಪರೀತ ಸಂಕಲ್ಪದಿಂದ ಹೀಗಾಗಿದೆ. ಆದರೂ ನೀನು ಚಿಂತಿಸಬೇಡ. ನನ್ನ ಯೋಗಬಲದಿಂದ ಅವಳನ್ನು ಸುಂದರ ರಾಜಕುಮಾರ- ನನ್ನಾಗಿ ಮಾಡುವೆ'' ಎಂದು ಹೇಳಿ ಆ ಉದ್ದೇದಿಂದ ಪರಮಾತ್ಮನ ಸ್ತುತಿ ಮಾಡಲು ಪ್ರಾರಂಭಿಸಿದರು. ಆ ಸ್ತುತಿಗೆ ಪ್ರಸನ್ನನಾದ ಪರಮಾತ್ಮನು ಅದೇ ರೀತಿ ಮಾಡಿದನು. ಆದ್ದರಿಂದ ಅವನ ಹೆಸರು ಸುದ್ಯುಮ್ನನೆಂದಾಯಿತು. ಒಂದು ದಿನ ಸುದ್ಯುಮ್ನನು ಅಶ್ವಾರೂಢನಾಗಿ ತನ್ನ ಮಂತ್ರಿಗಳಿಂದೊಡಗೂಡಿ ಬೇಟೆಯಾಡಲಿಕ್ಕೆಂದು ವನಕ್ಕೆ ಹೋದನು. ಆಗ ಮೃಗದ ಬೆನ್ನು ಹತ್ತಿ ದೈವಯೋಗದಿಂದ ಇಲಾವೃತ ಖಂಡವನ್ನು ಪ್ರವೇಶಿಸಿದನು. ಕೂಡಲೇ ಅವರು ಮತ್ತು ಅವರ ಕುದುರೆಗಳು ಹೆಣ್ಣಾದರು (ಲಿಂಗಪಲ್ಲಟ). ಆಗ ಅವರು ಒಬ್ಬರನ್ನೊಬ್ಬರು ನೋಡಿ ನಾಚಿಕೆಯಿಂದ ತಲೆಬಾಗಿದರು. ಇದರಿಂದ ಪುರುಷ ಸ್ತ್ರೀಯಾಗಬಹುದು, ಆದರೆ ಸ್ತ್ರೀಯು ಖಂಡಿತ ಪುರುಷಳಾಗಲಾರಳು. ಈ ಅಭಿಪ್ರಾಯವು ಗೀತಾಚಾರ್ಯನಾದ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ ವಿಷಯವಾಗಿದೆ.

❑❑

## ಶ್ರೀ ಜಯರಾಮ ಸರಜೋಷಿ ನಿಧನ

ಗಂಗಾವತಿಯ ಮೂಲದ ಶ್ರೀಮಠದ ಶಿಷ್ಯರಾದ ಶ್ರೀಜಯರಾಮ ಸರಜೋಷಿ-ಯವರು ದಿನಾಂಕ ೦೫-೦೪-೨೦೦೭ ರಂದು ಗಂಗಾವತಿಯಲ್ಲಿ ನಿಧನ ಹೊಂದಿದರು. ಶ್ರೀಯುತರು ತಮ್ಮ ತಂದೆಯವರ ಕಾಲದಿಂದಲೂ ಶ್ರೀಮಠದ ಎಲ್ಲ ಕಾರ್ಯಗಳಲ್ಲೂ ತೊಡಗಿಸಿಕೊಂಡು ಅನೇಕ ವರ್ಷಗಳ ಕಾಲ ನವಬೃಂದಾವನ ಪ್ರಾಂತ್ಯದ ಮಠಾಧಿಕಾರಿ-ಗಳಾಗಿ ನವಬೃಂದಾವನಗಡ್ಡೆಯಲ್ಲಿ ಶ್ರೀಮಠದ ಎಲ್ಲ ಬೃಂದಾವನಗಳಿಗೆ ಬಹುವರ್ಷಗಳ ಕಾಲ ಪೂಜಾಕಾರ್ಯಗಳನ್ನು ನೆರವೇರಿಸಿದವರು. ಅನೇಕ ಲೇಖನಗಳನ್ನು ಹಾಗೂ ಕಿರು ಹೊತ್ತಿಗೆಗಳನ್ನು ರಚಿಸಿ ಸಿದ್ಧಾಂತಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಇವರ ಆತ್ಮಕ್ಕೆ ಶಾಂತಿ ದೊರೆಯಲೆಂದು ಶ್ರೀಗುರುಸಾರ್ವಭೌಮ ಪತ್ರಿಕಾ ಬಳಗವು ಶ್ರೀರಾಘವೇಂದ್ರ-ತೀರ್ಥರಲ್ಲಿ ಪ್ರಾರ್ಥಿಸುತ್ತದೆ.

– ಸಂ.

||ಶ್ರೀಹರಿ ಸರ್ವೋತ್ತಮ || ||ಹರೇ ಶ್ರೀನಿವಾಸ || ||ವಾಯುಜೀವೋತ್ತಮ ||

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತಿದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

**|| ಸರ್ವೇ ಜನಾಃ ಸುಖಿನೋ ಭವಂತು ||**

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗುತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

**ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ**

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಕರು ಮತ್ತು ವೇದ ಪುರೋಹಿತರು**

ನಂ. 122, 2ನೇ ಮಹಡಿ, 2ನೇ ಬ್ಲಾಕ್, ಗಣೇಶ ಮಂದಿರ ರಸ್ತೆ
ತ್ಯಾಗರಾಜನಗರ, ಬೆಂಗಳೂರು - 560 028

**ದೂರವಾಣಿ : 080-55351688, ಮೊಬೈಲ್ : 98444 75429**





# ಗೀತಾಜ್ಞಾನ

■ ಡಾ. ಪಾಂಡುರಂಗ ಜೋರಾಪುರ
ಜನಸೇವಾಸಮಿತಿ ಆಶ್ರಮ, ಪೋಸ್ಟ್ : ನೀರಲಕೇರಿ, ಜಿಲ್ಲಾ : ಬಾಗಲಕೋಟೆ - ೫೮೭ ೧೧೧

**ಜ್ಞಾ**ನದಂತಹ ಪವಿತ್ರ ವಿಷಯ ಬೇರೆ ಇಲ್ಲ ಎಂದು ಹೇಳುತ್ತಾ, ಜ್ಞಾನವೆಂದರೆ ಯಾವುದು? ಅದರ ಮಹತ್ವವೇನು? ಫಲವೇನು? ಅದನ್ನು ಹೇಗೆ ದೊರಕಿಸಿಕೊಳ್ಳಬೇಕು? ಯಾವುದರ ಜ್ಞಾನ ಪಡೆಯಬೇಕು? ಮುಂತಾದ ಎಲ್ಲ ವಿವರಗಳನ್ನು ಗೀತಾಚಾರ್ಯ ಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ.

ಲೋಕದಲ್ಲಿ ಅನೇಕ ವಿಷಯಗಳಿವೆ. ಅವುಗಳನ್ನು ತಿಳಿಯುವುದು ಜ್ಞಾನವಲ್ಲ. ಪರಮಾತ್ಮನ ಬಗ್ಗೆ ತಿಳಿದುಕೊಳ್ಳುವುದೇ, ತತ್ತ್ವಜ್ಞಾನ ಸಾಧನೆಯೇ ಜ್ಞಾನ, ಉಳಿದದ್ದು ಅಜ್ಞಾನ.

**ಆಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್ ।**
**ಏತದ್ ಜ್ಞಾನಮಿತಿ ಪ್ರೋಕ್ತಮ್ ಅಜ್ಞಾನಂ ಯದತೋಽನ್ಯಥಾ ॥** - (೧೩-೧೨)

ಈ ಜ್ಞಾನವನ್ನು ಪಡೆದರೆ ಭ್ರಮೆ ಉಂಟಾಗುವುದಿಲ್ಲ. **"ನ ಪುನರ್ಮೋಹಮೇವಂ ಯಾಸ್ಯಸಿ"**. ಈ ಜ್ಞಾನವೆಂದರೆ, ಪರಮಾತ್ಮನು ಸರ್ವವ್ಯಾಪ್ತ, ಸರ್ವಾಂತರ್ಯಾಮಿ, ಸಕಲಜೀವಿಗಳು ಅವನನ್ನು ಆಶ್ರಯಿಸಿರುವವು. ಇದನ್ನು ತಿಳಿದರೆ ಬಂಧುಪ್ರೇಮ ಇತ್ಯಾದಿ ಮೋಹ ಉಂಟಾಗುವುದಿಲ್ಲ. ಈ ಜ್ಞಾನದಿಂದ ಸಂಶಯವನ್ನು ಕಳೆದುಕೊಂಡವನನ್ನು ಕರ್ಮ ಬಂಧಿಸುವುದಿಲ್ಲ. **"ಜ್ಞಾನಸಂಛಿನ್ನಸಂಶಯಮ್ ಆತ್ಮಾನಂ ತಂ ನ ಕರ್ಮಾಣಿ ನಿಬಧ್ನಂತಿ"** (೪-೪೧). ಆದ್ದರಿಂದ ಜ್ಞಾನವೆಂಬ ಹರಿತವಾದ ಖಡ್ಗದಿಂದ ಸಂಶಯವನ್ನು ಛೇದಿಸು, ಕರ್ತವ್ಯಪರನಾಗು, **"ಜ್ಞಾನಾಸಿನಾಽತ್ಮನಃ ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ"** ಎಂದು ಶ್ರೀಕೃಷ್ಣನು ಉಪದೇಶಿಸುತ್ತಾನೆ. ಎಂಥಹಾ ಪಾಪಿಯಾದರೂ ಜ್ಞಾನನೌಕೆಯನ್ನು ಆಶ್ರಯಿಸಿ ಪಾರಾಗಬಹುದು. **"ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ"** ಎಲ್ಲ ಯಜ್ಞಗಳಿಗಿಂತ ಜ್ಞಾನಯಜ್ಞವೇ ಶ್ರೇಷ್ಠ. ಎಲ್ಲ ಕರ್ಮಗಳ ಅಂತಿಮ ಫಲ, ಜ್ಞಾನವೇ.

**ಶ್ರೇಯಾನ್ ದ್ರವ್ಯಾನುಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪಃ ।**
**ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥** - (೪-೩೩)

ಅಜ್ಞಾನ, ವಿಪರೀತಜ್ಞಾನ, ಮಿಥ್ಯಾಜ್ಞಾನ, ಅಶ್ರದ್ಧೆ, ಸಂಶಯ ಇರುವವನಿಗೆ ಇಹಪರ ಶಾಂತಿ ಇಲ್ಲ. **“ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ”**. (೪-೪೦). ಜ್ಞಾನ-ಭಕ್ತಿ ಪರಸ್ಪರ ಅವಲಂಬಿಸಿವೆ. ಜ್ಞಾನವಿಲ್ಲದೆ ಭಕ್ತಿಯಿಲ್ಲ, ಭಕ್ತಿಯಿಲ್ಲದೆ ಅಪರೋಕ್ಷವಿಲ್ಲ. **“ವಿನಾ ಜ್ಞಾನಂ ಕುತೋ ಭಕ್ತಿಃ ಕುತೋ ಭಕ್ತಿಂ ವಿನಾ ಚ ತತ್”**ಎಂದು ‘‘ಗೌತಮಖಿಲ’’ದಲ್ಲಿ ಹೇಳಿದೆ. ಪರಮೇಶ್ವರನಲ್ಲಿ ಭಕ್ತಿ, ಪರಮೇಶ್ವರನ ಬಗ್ಗೆ ಜ್ಞಾನ, ಅನ್ಯತ್ರ ವಿರಕ್ತಿ ಇವು ಮೂರೂ ಏಕಕಾಲದಲ್ಲೇ ಇರುವುವು ಎಂದು ಭಾಗವತವೂ ಹೇಳುತ್ತದೆ. **“ಭಕ್ತಿಃ ಪರೇ ಸ್ವೇಽನುಭವೋ ವಿರಕ್ತಿರನ್ಯತ್ರ ಚೈತತ್ ತ್ರಿಕಮೇಕಕಾಲಂ”**(ಗೀತಾಭಾಷ್ಯ - ೯-೩೧).

ಈ ಜ್ಞಾನ ಸುಲಭವಾಗಿ ಎಲ್ಲರಿಗೂ ದೊರಕುವುದಿಲ್ಲ. ಪರಮಾತ್ಮನ ಬಗ್ಗೆ ಶ್ರದ್ಧೆಯುಳ್ಳವನೇ ಜ್ಞಾನ ಪಡೆಯುತ್ತಾನೆ, ಜ್ಞಾನ ಪಡೆದು ಮುಕ್ತನಾಗುತ್ತಾನೆ -

**ಶ್ರದ್ಧಾವಾನ್ ಲಭತೇ ಜ್ಞಾನಂ ಮತ್ಪರಂ ಸಂಯತೇಂದ್ರಿಯಃ ।**
**ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥** - (೪-೩೯)

ಯಾವಾಗ ಈ ಶ್ರದ್ಧೆ, ಅರಿವು ಉಂಟಾದೀತೆಂದು ಹೇಳಲು ಬರುವುದಿಲ್ಲ. ಈ ಜನ್ಮದಲ್ಲೇ ಸಾಧಿಸಬಹುದು, ಅನೇಕ ಜನ್ಮಗಳ ನಂತರವೇ ಆದೀತು. ‘‘ವಾಸುದೇವನೇ ಎಲ್ಲ’’ ಎಂಬ ಜ್ಞಾನವುಳ್ಳ ಮಹಾತ್ಮ ದುರ್ಲಭ-

**ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।**
**ವಾಸುದೇವಂ ಸರ್ವಮಿತಿ ಸ ಮಹಾತ್ಮಾ ಚ ದುರ್ಲಭಃ ॥** - (೭-೧೯)

ಇದು ಮನುಷ್ಯ ಪ್ರಯತ್ನ ಮಾತ್ರದಿಂದ ಸಾಧ್ಯವಾದೀತೆಂದು ಹೇಳಲು ಬರುವುದಿಲ್ಲ. ಹಾಗಿದ್ದರೆ ಶ್ರದ್ಧೆ ಉಳ್ಳವನಿಗೂ, ಸತತ ಪ್ರಯತ್ನಶೀಲನಿಗೂ ನಿರಾಸೆಯೇ? ಎಂದರೆ - ಹಾಗೇನೂ ಇಲ್ಲ ಎನ್ನುತ್ತಾನೆ ಭಕ್ತವತ್ಸಲ. ‘‘ಯಾರು ನನ್ನನ್ನೇ ನಂಬಿ ನನಗೇ ಶರಣಾಗುತ್ತಾರೋ, ಅವರಲ್ಲಿ ಕರುಣೆ ತೋರಿ ಅವರ ಅಜ್ಞಾನವನ್ನು ನಾಶಮಾಡುವೆ, ಜ್ಞಾನವೆಂಬ ದೀಪದಿಂದ ಅವರ ಅಜ್ಞಾನವೆಂಬ ಕತ್ತಲೆಯನ್ನು ದೂರಮಾಡುವೆ’’ -

**ತೇಷಾಮೇವಾನುಕಂಪಾರ್ಥಮ್ ಅಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥** - (೧೦-೧೧)

ಅವರಿಗೆ ಬುದ್ಧಿಯನ್ನು ಕೊಡುವೆ, **“ದದಾಮಿ ಬುದ್ಧಿಯೋಗಂ”**. ಏಕೆಂದರೆ, ತ್ರಿಗುಣಗಳ ಮಾಯೆಯಿಂದ ನನ್ನನ್ನು ತಿಳಿಯಲು ಶಕ್ತರಾಗುವುದಿಲ್ಲ. ನನ್ನ ಅನುಗ್ರಹವಾದರೆ ಮಾತ್ರ ಮಾಯಾಪರದೆ ಹರಿಯುವುದು -



**ತ್ರಿಭಿರ್ಗುಣಮಯೈರ್ಭಾವೈಃ ಏಭಿಃ ಸರ್ವಮಿದಂ ಜಗತ್ ।**
**ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥** - (೭-೧೩)

ನನಗೆ ಶರಣು ಬಂದವರು **“ಮಾಯಾಮೇತಾಂ ತರಂತಿ”** ಎನ್ನುತ್ತಾನೆ. ನಾಲ್ಕು ವಿಧದ ಜನರು ನನ್ನನ್ನು ಪೂಜಿಸುವರು. ಆರ್ತರು, ಜಿಜ್ಞಾಸುಗಳು, ಭಾಗ್ಯ-ಭೋಗ ಬಯಸುವವರು, ಜ್ಞಾನಿಗಳು. ಇವರಲ್ಲಿ ಜ್ಞಾನಿಯೇ ನನಗೆ ಹೆಚ್ಚು ಪ್ರಿಯ. ಅವರಿಗೂ ನಾನೇ ಪ್ರಿಯ. ಜ್ಞಾನಬಲದಿಂದ ಸಾತ್ವಿಕರು ಊರ್ಧ್ವಲೋಕವನ್ನು ಪಡೆಯುತ್ತಾರೆ. **“ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ”** (೧೪-೧೮).

ಇನ್ನು ಮುಖ್ಯವಿಷಯ. ಏನನ್ನು ತಿಳಿಯಬೇಕು? ಯಾವ ವಿಷಯದ ಜ್ಞಾನ ಮಾಡಿಕೊಳ್ಳಬೇಕೆಂಬುದನ್ನು ಬಹುವಿಸ್ತಾರವಾಗಿ ವಿವರಿಸುತ್ತಾನೆ, ಶ್ರೀಕೃಷ್ಣ ಸರ್ವ ಶಾಸ್ತ್ರಗಳ ಸಾರ ಎಂದು ಹೇಳುವುದಾದರೆ, ಜೀವಿಗಳೆಲ್ಲ ಪರಮಾತ್ಮನ ಅಧೀನರು. ಅವನಿಂದಲೇ ಜ್ಞಾನ-ಅಜ್ಞಾನ, ಸುಖ-ದುಃಖ, ಜಗತ್ತಿನ ಸೃಷ್ಟಿ ಅವನಿಂದಲೇ. ಅವನೇ ಜಗದ ಪಿತ. ಮಹಾಲಕ್ಷ್ಮಿಯೇ ತಾಯಿ.

**ಸರ್ವಯೋನಿಷು ಕೌಂತೇಯ! ಮೂರ್ತಯಃ ಸಂಭವಂತಿ ಯಾಃ ।**
**ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜ ಪ್ರದೇ ಪಿತಾ ॥** - (೧೪-೪)

ತ್ರಿಗುಣಗಳೇ ಜೀವಿಗಳ ಬಂಧನಕ್ಕೆ ಕಾರಣ -

**ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾಃ ।**
**ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥** - (೧೪-೫)

ರಾಜಸಗುಣವು ಆಸೆ, ಅತ್ಯಾಸಕ್ತಿಗೆ ಕಾರಣ. ಜೀವಿಗಳನ್ನು ಕರ್ಮಗಳಲ್ಲಿ ಬಂಧಿಸುತ್ತದೆ. ಜೀವಿಗಳು ತಮ್ಮ ಇಚ್ಛೆಗಳನ್ನು ಪೂರೈಸಲು ಕರ್ಮಾಸಕ್ತರಾಗುತ್ತಾರೆ. ಜನನ-ಮರಣಗಳ ಸುಳಿಯಲ್ಲಿ ಸಿಲುಕುತ್ತಾರೆ -

**ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾ ಸಂಗ ಸಮುದ್ಭವಮ್ ।**
**ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥** - (೧೪-೭)

ಈ ಗುಣಗಳಿಂದಲೇ ಜೀವಿಗಳಿಗೆ ಸುಖ, ಕರ್ಮಬಂಧನ, ಅಜ್ಞಾನ-ಅಧರ್ಮ.

**ಸತ್ವಂ ಸುಖೇ ಸಂಜಯತಿ ರಜಃ ಕರ್ಮಾಣಿ ಭಾರತ ।**
**ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥** - (೧೪-೯)

ಒಳ್ಳೆಯ ಸಾತ್ವಿಕ ಕರ್ಮಕ್ಕೆ ಒಳ್ಳೆಯ ಫಲ. ರಾಜಸ ಕರ್ಮಗಳಿಗೆ ಸುಖಮಿಶ್ರಿತ ದುಃಖ, ತಾಮಸಗುಣಕ್ಕೆ ಅಜ್ಞಾನ (ಅದರಿಂದ ಶಾಶ್ವತ ದುಃಖ) ಫಲ.

**ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಮ್ ।**
**ರಜಸಸ್ತು ಫಲಂ ದುಃಖಮ್ ಅಜ್ಞಾನಂ ತಮಸಃ ಫಲಮ್ ॥** - (೧೪-೧೬)

ತ್ರಿಗುಣಗಳಿಂದ, ಅವುಗಳಿಂದ ಉಂಟಾಗುವ ದುಷ್ಪರಿಣಾಮಗಳಿಂದ ಪಾರಾಗ ಬಯಸುವವರು, ಅವುಗಳ ದುಷ್ಪರಿಣಾಮಗಳನ್ನು ತಿಳಿಯಬೇಕು. ತ್ರಿಗುಣಗಳನ್ನು ಮೀರಿ ನಿಂತವನಿಗೆ, ಸುಖ-ದುಃಖ, ಪ್ರಿಯಾಪ್ರಿಯ, ಮಾನಾಪಮಾನ, ನಿಂದಾಸ್ತುತಿಗಳು ಪ್ರಭಾವ ಬೀರುವುದಿಲ್ಲ. ಅವೈಷ್ಣವ ಕಾರ್ಯಗಳಲ್ಲಿ ಎಂದೂ ಪ್ರವೃತ್ತನಾಗುವುದಿಲ್ಲ (೧೪-೨೪, ೨೫).

ವೇದಾದಿ ಎಲ್ಲ ಶಾಸ್ತ್ರಗಳಲ್ಲಿ ಹೇಳಿದ ಪರಮಾತ್ಮನ ಗುಣಗಳನ್ನು ತಿಳಿದು ಉಪಾಸನೆ ಮಾಡುವವರಿಗೆ ಮಾತ್ರ ಪರಮಾತ್ಮ ಲಭ್ಯ ಎಂದು ಕೂರ್ಮಪುರಾಣ ಹೇಳುತ್ತದೆ -

**ವೇದಾದ್ಯುಕ್ತಂ ತು ಸರ್ವಂ ಯೋ ಜ್ಞಾತ್ವೋಪಾಸ್ತೇ ಸದಾ ಹಿ ಮಾಮ್ ।**
**ತಸ್ಯೈವ ದರ್ಶನಪಥಂ ಯಾಮಿ ನಾನ್ಯಸ್ಯ ಕಸ್ಯಚಿತ್ ॥** - (ಗೀತಾಭಾಷ್ಯ - ೪-೯)

ಆದ್ದರಿಂದಲೇ ತೈತ್ತರೀಯ ಉಪನಿಷತ್ತು ಸಹ, ಗುರುಸೇವೆ - ಶ್ರವಣ - ಮನನ - ಧ್ಯಾನ ಮುಂತಾದ ಎಲ್ಲ ಸಾಧನಗಳಿಂದ ಪರಮಾತ್ಮನ ಜ್ಞಾನವನ್ನು ಸಂಪಾದಿಸಬೇಕು ಎಂದು ಆದೇಶಿಸುತ್ತದೆ - **"ಯಯಾ ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್"** (ಭೃಗುವಲ್ಲಿ ೧೧). ಹಾಗಾದರೆ ಪರಮಾತ್ಮನನ್ನು ಪಡೆಯಲು ಬಹುಶ್ರಮಪಡಬೇಕಾದೀತು, ದೊರಕದೆ ಹೋಗಲೂಬಹುದು ಎಂಬ ಅನುಮಾನಕ್ಕೆ ಕಾರಣವಿಲ್ಲ. ''ಅನನ್ಯ ಭಕ್ತಿಯಿಂದ ಸತತ ಸ್ಮರಿಸುವವರಿಗೆ ನಾನು ಬಹಳ ಸುಲಭ'' ಎಂದು ಪರಮಾತ್ಮನೇ ಕರುಣೆಯಿಂದ ಭರವಸೆ ಕೊಡುತ್ತಾನೆ -

**ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।**
**ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥** - (೮-೧೪)

ಹಾಗಿದ್ದರೆ ಈ ಜ್ಞಾನವನ್ನು ಹೇಗೆ ಪಡೆಯಬೇಕು ಎಂಬುದನ್ನು ಸಹ ಅವನೇ ಮಾರ್ಗದರ್ಶನ ಮಾಡಿದ್ದಾನೆ. ''ಜ್ಞಾನಿಗಳ ಬಳಿಗೆ ವಿನಯದಿಂದ ಹೋಗಿ ಅವರ ಸೇವೆಮಾಡಿ, ಅನುಮಾನ ಬಂದಲ್ಲಿ ಪ್ರಶ್ನೆಗಳನ್ನು ಕೇಳಿ. (ಅವರ ಮುಖಾಂತರ) ನಾನೇ ಜ್ಞಾನೋಪದೇಶ ಮಾಡುವೆ'' (ಗೀತಾತಾತ್ಪರ್ಯ - ೪-೩೪).

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥** - (೪-೩೪)

❑❑



ಲೇಖನಾಂಕ

# ಆಧುನಿಕರ ದೃಷ್ಟಿಯಲ್ಲಿ ಋಗ್ವೇದಕಾಲೀನ ದೇವತೆಗಳು

## ಭಾಗ - ೩ : ರುದ್ರ

■ ಡಾ. ಕೊರಟಗೆರೆ ವಾಸುದೇವಾಚಾರ್ಯ
ನಂ. ೧೪, ಶ್ರೀನಿವಾಸ ಕೃಪ, ದೇವನೂರು ರಸ್ತೆ, ತುಮಕೂರು - ೫೭೨ ೧೦೨

ಹಿಂದಿನ ಸಂಚಿಕೆಯಿಂದ.......

ಅಜ್ಞಾತಮೂಲವುಳ್ಳ ಐದು ಅಂತರಿಕ್ಷಸ್ಥಾನ ದೇವತೆಗಳಲ್ಲಿ 'ರುದ್ರ'ನೂ ಸಹ ಒಬ್ಬನು. ಋಗ್ವೇದದ ರುದ್ರಸಂಬಂಧಿ ಐದು ಸೂಕ್ತಗಳಲ್ಲಿ ಅನೇಕ ಮಂತ್ರಗಳಿವೆ. ಈ ಮಂತ್ರ ದ್ರಷ್ಟಾರರು ಗೃತ್ಸಮದ ಋಷಿಗಳು.

### ರುದ್ರನ ಮಹತ್ವ

ಋಗ್ವೇದಕಾಲದಲ್ಲಿ ಈತ ಪ್ರಧಾನದೇವತೆಯೇನಲ್ಲ. ಮಾನವರಂತೆ ಈತನಿಗೂ ಕೈಗಳು, ತುಟಿಗಳು, ತೋಳು, ಜಟೆಗಳು ಇವೆ. ಬಭ್ರುವರ್ಣ, ವಜ್ರಬಾಹು, ಸುವರ್ಣ ಕಾಂತಿ, ಸುವರ್ಣಾಭರಣ, ಬಣ್ಣ ಬಣ್ಣದ ಮಾಲಾಧಾರಿ, ವಜ್ರಬಾಹು. ಶರ ಹಾಗೂ ಧನುಸ್ಸು ಉಳ್ಳವನು. ಮರುತ್ತುಗಳ ಜನಕ, ಆ ಮರುತ್ತುಗಳು ಪೃಶ್ನಿ ಎಂಬ ಹಸುವಿನ ಕೆಚ್ಚಲಿನಿಂದ ಹುಟ್ಟಿದವರು.

ರುದ್ರನು ಉಗ್ರ ಹಾಗೂ ಮೃಗದಂತೆ ನಾಶಕರ. ಆತನಿಗೆ 'ವೃಷಭ' ಎಂಬ ಮತ್ತೊಂದು ಹೆಸರೂ ಇದೆ. ಎಲ್ಲಕ್ಕಿಂತ ಆತನು ಶ್ರೇಷ್ಠ ಮಹಿಮಾವಾನ್. ಅತಿ ಬಲಶಾಲಿ, ಅವನ ಹೆಸರೇ ಪ್ರಚಂಡ. ವಿಶಾಲ ಜಗತ್ತಿಗೆ ಆತ ಯಜಮಾನ. ಮಾನವನ ಸರ್ವಸ್ವವನ್ನೂ ಬಲ್ಲವನು. ಹೇಗೆ ಆತ ಉಗ್ರನೋ ಹಾಗೆಯೇ ದಯಾಳುವೂ ಹೌದು (ಮೀಢ್ವಾಂಸ). ಆತನ ಕ್ರೋಧ ಹಾಗೂ ಕ್ರೌರ್ಯಗಳು ಭಯವನ್ನು ಉಂಟುಮಾಡುತ್ತವೆ. ಆದ್ದರಿಂದ ಅವುಗಳಿಂದ ಹಾನಿಯಾಗದಂತೆ ಮಾಡಬೇಕೆಂದು ಅವನನ್ನು ವೇದಾಭಿಮಾನಿಗಳು ಸ್ತುತಿಸಿದ್ದಾರೆ. ಕಷ್ಟಗಳನ್ನು ದೂರಮಾಡಿ ಮಂಗಳವನ್ನು ಕೊಡಬಲ್ಲವನಾದ್ದರಿಂದ ಆತ 'ಶಿವ'. ಹಿತಕಾರಿ. ಚಿಕಿತ್ಸಾಶಕ್ತಿ ರುದ್ರನ ವಿಶಿಷ್ಟ ಲಕ್ಷಣ. ಆದ್ದರಿಂದ ಆತ 'ಭಿಷಜಾಂ ಭಿಷಕ್ ತಮ'. ಅವನಲ್ಲಿ ನೂರಾರು ಚಿಕಿತ್ಸೆಗಳಿವೆ. ಅವನ ಮತ್ತೊಂದು ಹೆಸರು 'ಜಲಾಷಭೇಷಜಃ' (ಸುಖಕರವಾಗಿ ಚಿಕಿತ್ಸಾಕಾರಿ ಹಸ್ತಗಳುಳ್ಳವನು).

ಪ್ರಕೃತಿಯ ಯಾವ ಅಂಶದ ಪ್ರತಿನಿಧಿ ದೇವತೆ ಎಂದು ಆತನು ನಿರ್ದೇಶಿಸಲ್ಪಟ್ಟಿಲ್ಲ. ಆದರೂ ಮಿಂಚು, ಸಿಡಿಲುಗಳ ಮೂಲಕ ಧ್ವಂಸಕಾರಿಯಾದ 'ಬಿರುಗಾಳಿ' ಆತನ ಹಿನ್ನೆಲೆ ಎಂದು ಹೇಳುತ್ತಾರೆ. ಬಿರುಗಾಳಿಯು ಧ್ವಂಸಕರವಾದರೂ ಶುದ್ಧಿಕಾರಕ ಹಾಗೂ ಫಲದಾಯಕವಾದ್ದರಿಂದ ಅವನಲ್ಲಿ ಚಿಕಿತ್ಸಾಗುಣವೂ, ಹಿತಕಾರಿ ಸ್ವಭಾವವೂ ಇದೆ. ಕ್ರೋಧಯುಕ್ತನಾದ ಅವನನ್ನು ಪ್ರಸನ್ನೀಕರಿಸಿಕೊಳ್ಳುವ ಪದ 'ಶಿವ' ಎಂಬುದು. ವೈದಿಕಕಾಲದ 'ರುದ್ರ'ನು ಕಾಲಾಂತರದಲ್ಲಿ 'ಶಿವ'ನಾಗಿರಬಹುದು ಎಂದು ವಿದ್ವಾಂಸರ ಮತ.

ಮಂತ್ರಗಳು ಹಾಗೂ ಅದರ ಅರ್ಥಗಳು –

**೧. "ಆತೇ ಪಿತರ್ಮರುತಾಂ .................... ಪ್ರಜಾಭಿಃ ।"**

ಮರುತ್ತುಗಳ ಜನಕನಾದ ರುದ್ರನೇ! ನಿನ್ನ ಪ್ರಸನ್ನ ಮನಸ್ಕತೆ ನಮ್ಮ ಮೇಲೆ ಬರಲಿ. ನಮಗೆ ಸೂರ್ಯದರ್ಶನವಾಗದಂತೆ ಮಾಡಬೇಡ. ನಮ್ಮ ಅಪರಾಧಗಳನ್ನು ಕ್ಷಮಿಸು.

**೨. "ತ್ವಾದತ್ತೇಭೀ .................... ವಿಷೂಚೀಃ ।"**

ಎಲೈ ರುದ್ರನೇ, ನೀನು ಕೊಡುವ ಹಿತಕಾರಿ ಔಷಧಗಳಿಂದ ನೂರು ಶಿಶಿರಗಳನ್ನು ಮತ್ತೆ ಕಂಡೇನು! ನಮ್ಮಲ್ಲಿನ ದ್ವೇಷಭಾವನೆಯನ್ನು ದೂರಮಾಡು. ಎಲ್ಲ ದುಃಖ, ರೋಗಗಳನ್ನು ದಿಕ್ಕುಗಳಿಂದ ಆಚೆ ತೊಲಗಿಸು.

ವಿ.ಸೂ. : ಮಂತ್ರದಲ್ಲಿ 'ಶತಂ ಸಮಾಃ' ಎಂದಿದೆ. ಋತುಗಳನ್ನು ಸಂವತ್ಸರದ ಪ್ರತೀಕಗಳೆಂದು ಬಳಸುವುದು ಪದ್ಧತಿಯಲ್ಲಿದೆ. ಇದರಿಂದ ನೂರು ಹೇಮಂತ ಋತು ಎಂದರೆ ನೂರು ವರ್ಷಗಳು ಎಂದೂ ಆಗುತ್ತದೆ. (ದೇವಮಾನ, ಪಿತೃಮಾನ, ಮನುಷ್ಯಮಾನಗಳಂತೆ).

**೩. "ಶ್ರೇಷ್ಠೋ ಜಾತಸ್ಯ .................... ಯುಯೋಧಿಃ ।"**

ಎಲೈ ದೇವತಾರುದ್ರನೇ! ಹುಟ್ಟಿದ ಪದಾರ್ಥಗಳ ಪೈಕಿ ನೀನು ತೇಜಃಪದಾರ್ಥಗಳಲ್ಲಿ ಉತ್ತಮನಾಗಿದ್ದೀಯೆ. ನೀನು ವಜ್ರಬಾಹು, ಪರಾಕ್ರಮಿಗಳಿಗಿಂತ ಪರಾಕ್ರಮಿ. ನಮ್ಮನ್ನು ದುಃಖಸಾಗರದಿಂದ ಕ್ಷೇಮದ ದಡವನ್ನು ತಲುಪಿಸು. ದುಷ್ಕಾರ್ಯಗಳ ಆಕ್ರಮಣಗಳನ್ನು ನಿವಾರಿಸು.



**೪. "ಮಾ ತ್ವಾ ರುದ್ರ .................... ಶೃಣೋಮಿ ।"**

ನಾವು ಸರಿಯಾಗಿ ನಮನಾದಿಗಳನ್ನು ಮಾಡದಿದ್ದರೆ ಕೋಪಿಸಿಕೊಳ್ಳಬೇಡ. ಅಮಂಗಳ ಸ್ತೋತ್ರದಿಂದ ಅಥವಾ ಸಾಮೂಹಿಕ ಸ್ತುತಿಯಿಂದ ನಿನಗೆ ಕೋಪ-ಉಂಟಾಗುವಂತೆ ನಾವು ಮಾಡುವುದಿಲ್ಲ. ನಮ್ಮ ವೀರರನ್ನು ಔಷಧಿಗಳಿಂದ ಎಚ್ಚರ ಬರುವಂತೆ ಮಾಡು. ಏಕೆಂದರೆ ನೀನು ವೈದ್ಯರಲ್ಲಿ ಶ್ರೇಷ್ಠ ವೈದ್ಯನೆಂದು ತಿಳಿದಿದ್ದೇನೆ.

**೫. "ಹವೀಮಭಿರ್ಹವ ತೇ .................... ರೀರಧನ್ಮನಾಯೈ ।"**

ಹವಿಸ್ಸುಗಳಿಂದ, ಸ್ತುತಿಗಳಿಂದ ರುದ್ರನು ಆಹ್ವಾನಿತನಾಗುತ್ತಾನೆ. ಅಂತಹ ನಿನ್ನನ್ನು ಸ್ತೋತ್ರಗಳಿಂದ ಸ್ತುತಿಸುತ್ತೇನೆ. ಭಕ್ತರಲ್ಲಿ ಆತನು ಅನುಕಂಪವುಳ್ಳವನು, ಸುಲಭವಾಗಿ ಆಹ್ವಾನಿಸಲ್ಪಡುವವನು, ಸುವರ್ಣವರ್ಣ, ಕೆಂಪಾದ ತುಟಿಯುಳ್ಳ ಆತನು ನಮ್ಮನ್ನು ಆತನ ದ್ವೇಷಕ್ಕೆ ಎಡೆಮಾಡದಿರಲಿ.

**೬. "ಉನ್ಮಾಮ ಮಂದ .................... ರುದ್ರಸ್ಯ ಸುಮಾಂ ।"**

ಮರುತ್ತುಗಳಿಂದ ಕೂಡಿದ ರುದ್ರನು (ವೃಷಭನು) ತನ್ನ ಓಜಸ್ಸಿನಿಂದ ಕೂಡಿದ ಬಲದಿಂದ ಪ್ರಾರ್ಥಿಸುವ ನನ್ನನ್ನು ಸಂತೋಷಪಡಿಸಿದ್ದಾನೆ. ಬೇಗೆಯಿಂದ ಬಳಲಿದವನು ನೆರಳನ್ನು ಆಶ್ರಯಿಸುವಂತೆ, ನಾನು ಸಂಸಾರತಾಪ ನಿವಾರಣೆಗೆ ರುದ್ರಾಶ್ರಯಿಯಾಗುವೆನು, ಆತನ ಸೌಮನಸ್ಕತೆ ನನಗೆ ಬೇಕು.

**೭. "ಕ್ವ ಆಸ್ಯ ತೇ ರುದ್ರ .................... ಚಕ್ಷ್ವಮಿಥಾಃ ।"**

ಎಲೈ ರುದ್ರನೇ! ಚಿಕಿತ್ಸಾಕರವಾದ, ಹಿತಕರವಾದ, ಸುಖದಾಯಕವಾದ, ಆ ನಿನ್ನ ಹಸ್ತಗಳೆಲ್ಲಿ? ದೇವತಾಸಂಬಂಧವಾದ ವ್ಯಥಾ ನಿವಾರಕನಾಗಿ ನೀನು ನನ್ನನ್ನು ಮನ್ನಿಸು.

**೮. "ಪ್ರ ಬಭ್ರವೇ ವೃಷಭಾಯ .................... ರುದ್ರಸ್ಯ ನಾಮ ।"**

ವೇದಾಭಿಮಾನಿದೇವತೆ ಹೇಳುತ್ತಾನೆ – ''ಹೊಂಬಣ್ಣದ, ಶುಭ್ರವರ್ಣದ, ವೃಷಭನಾಮಕನಾದ ಆತ ಬಲಶಾಲಿ. ಅಂತಹವನ ಶ್ರೇಷ್ಠವಾದ ಮಂಗಳಸ್ತುತಿಯನ್ನು ಉಚ್ಚರಿಸುತ್ತೇನೆ. ತೇಜಸ್ವಿಯಾದ ಅವನನ್ನು ಪ್ರಣಾಮಗಳಿಂದ ನಮಿಸುತ್ತೇನೆ. ಆತನ ಅತಿಕ್ರೂರವಾದ ಹೆಸರನ್ನು ಹಿಡಿದು ಕರೆಯುತ್ತೇನೆ.''

೯. "ಸ್ಥಿರೇಭಿರಂಗೈಃ .................... ದಸುಯಮ್ ।"

ಆತನ ಅಂಗಗಳು ದೃಢವಾಗಿವೆ, ಆತ ಬಹುರೂಪ ಉಳ್ಳವನು. ಉಗ್ರನು, ಹೊಂಬಣ್ಣದವನು, ಸ್ವರ್ಣಾಭರಣಾಲಂಕೃತ, ಈ ವಿಶಾಲ ಜಗತ್ತಿಗೆ ಆತ ಪ್ರಭು. ಅಂತಹವನಿಂದ ಈ ದೇವತಾಸಾಮ್ರಾಜ್ಯ ನಾಶವಾಗದಿರಲಿ.

೧೦. "ಅರ್ಹನ್ಬಿಭರ್ಷಿ .................... ತ್ವದಸ್ತಿ ।"

ಪೂಜ್ಯನಾದ ನೀನು ಬಿಲ್ಲು, ಬಾಣಗಳನ್ನು ಧರಿಸಿದ್ದೀಯೆ. ಶ್ರೇಷ್ಠವಾದ ಸ್ವರ್ಣಮಾಲೆಯನ್ನು ಧರಿಸಿದ್ದೀಯೆ. ಸಮಸ್ತ ಶಕ್ತಿಯನ್ನು ಪ್ರಯೋಗಿಸುತ್ತೀಯೆ, ಹೇ ರುದ್ರ! ನಿನಗಿಂತ ಬಲವತ್ತರವಾದುದು ಇಲ್ಲವೇ ಇಲ್ಲ.

(ಈ ಮಂತ್ರದಲ್ಲಿ 'ಅರ್ಹನ್' ಎಂಬ ಶಬ್ದವು ಮೂರು ಸಲ ಪ್ರಯೋಗವಾಗಿದೆ. ಇದರಿಂದ ರುದ್ರನ ಪೂಜ್ಯತೆ, ಅರ್ಹತೆಯ ಬಗ್ಗೆ ಬೆಳಕು ಚೆಲ್ಲುತ್ತದೆ ಎಂದು ಸಾಯಣಭಾಷ್ಯದಲ್ಲಿ ಹೇಳಿದೆ).

೧೧. "ಸ್ತುಹಿಶ್ರುತಂ ಗರ್ತಸದಂ ಯುವಾನಂ .................... ಸೇನಾಃ ।"

ಎಲೈ ಭಕ್ತನೇ! ಪ್ರಸಿದ್ಧನಾಗಿರುವ, ರಥಾಸೀನನಾಗಿರುವ ರುದ್ರನನ್ನು ನೀನು ಸ್ತುತಿಸು. ಆತನು ಯುವಕನೂ, ಉಗ್ರನೂ, ಭಯಂಕರ ಮೃಗದಂತೆ ಪರಿಹಾರಕನೂ ಆಗಿದ್ದಾನೆ. ಎಲೈ ರುದ್ರನೇ! ಮೇಲೆ ಕಾಣಿಸಿದಂತೆ ನೀನು ಭಕ್ತನಿಂದ ಸ್ತೋತ್ರ ಮಾಡಿಸಿಕೊಂಡವನಾಗಿ ಸ್ತುತಿಕರ್ತೃವನ್ನು ಅನುಗ್ರಹಿಸು. ನಿನ್ನ ಅಸ್ತ್ರಗಳು ನಮ್ಮಿಂದ ಬೇರೆಯವರನ್ನು ನಾಶಮಾಡಲಿ.

[೧. ಸಾಯಣಭಾಷ್ಯ :- ಮೃಗಂ ನ ಭೀಮಂ ಎಂದರೆ ಮೃಗಂ = ಸಿಂಹ ಇವ ಭಯಂಕರಃ ಎಂದು.

೨. ಕೊರಟಗೆರೆ ಟಿಪ್ಪಣಿ :- ಮೃಗಂ ನ = ಮೃಗವೇ ಅಲ್ಲ. ಕಿಂತು ಮೃಗಂ ಇವ ಭಯಂಕರಂ (ಮೃಗ ಇವ)

೩. ಮೃಳಾ ಎಂದರೆ ಸೇನೆ ಎಂದು ಪಾಶ್ಚಾತ್ಯ ವಿದ್ವಾಂಸ 'ಮ್ಯಾಗ್ಡೂನಲ್' ಅವರ ಅಭಿಪ್ರಾಯ. ಮೃಳಾ ಎಂದರೆ ಬಾಣಗಳು ಎಂದು ಸಾಯಣಭಾಷ್ಯ].

**ಶ್ರೀಮದಾನಂದತೀರ್ಥರ ಅಭಿಪ್ರಾಯ**

**ಭಾರತತಾತ್ಪರ್ಯನಿರ್ಣಯ ಅಧ್ಯಾಯ - ೧, ಶ್ಲೋಕ ೬೨ :**

ಶ್ರೀವಾದಿರಾಜರ ಟಿಪ್ಪಣಿ : ಎಲೈ ರುದ್ರನೇ! ಗರ್ತಸದಂ = ಹೃದಯಗುಹೆಯಲ್ಲಿ ಇರುವ ನಿತ್ಯತರುಣನೂ, ಸಿಂಹದಂತೆ ಭಯಂಕರನೂ, ಹಿರಣ್ಯಕಶಿಪುವಿನ



ಹತ್ತಿರಕ್ಕೆ ಹಾರಿ ಅವನನ್ನು ಕೊಂದವನು ಅಥವಾ ತನ್ನನ್ನು ಕೊಲ್ಲಲು ಬಂದವರನ್ನು ಕೊಲ್ಲುವವನೂ, ಶತ್ರುಗಳಿಗೆ ಭಯಂಕರನೂ ಇಂತಹ ಶ್ರುತಿಪ್ರತಿಪಾದ್ಯನೂ ಆದ ನೃಸಿಂಹನನ್ನು ಸ್ತೋತ್ರಮಾಡು. (ಹೀಗೆ ಆ ಮಂತ್ರದ ಎರಡು ಪಂಕ್ತಿಗಳನ್ನು ಮಾತ್ರ ಆಚಾರ್ಯರು ಉದಾಹರಿಸಿದ್ದಾರೆ).

ಉಳಿದ ಎರಡು ಸಾಲನ್ನು ಉದಾಹರಿಸಿ ಶ್ರೀವಾದಿರಾಜರು ಅರ್ಥೈಸುತ್ತಾರೆ -

ರುದ್ರನೇ! ನೃಸಿಂಹನನ್ನು ಸ್ತೋತ್ರಮಾಡತಕ್ಕವನು ನೀನು. ನೀನು ಮಾಡಿದ ಸ್ತೋತ್ರದ ಮೂಲಕ ನರಸಿಂಹನನ್ನು ಸ್ತೋತ್ರಮಾಡುವ ನನ್ನ ರಕ್ಷಕನಾಗು. ನಿನ್ನ ಭೂತ, ಪಿಶಾಚಾದಿ ಸೇನೆಗಳು ('ಪಿಶಾಚೋ ಗುಹ್ಯಕಃ ಸಿದ್ಧೋ ಭೂತೋऽಮೀ ದೇವಯೋ ನಯಃ' - ಅಮರಕೋಶ). ನಮ್ಮಿಂದ ಬೇರೆಯವರಾದ ಅವೈಷ್ಣವರನ್ನು ನಾಶಮಾಡಲಿ! ಪೂರ್ವಾರ್ಧದ ರುದ್ರಶಬ್ದವಾಚ್ಯನು ನರಸಿಂಹದೇವನು. ಸಾಯಣ ಭಾಷ್ಯದ ರೀತಿಯಲ್ಲಿ ರುದ್ರನೇ.

೧೨. "ಕುಮಾರಶ್ಚಿತ್ಪಿತರಂ ವಂದಮಾನಂ .................... ರಾಸ್ವಸ್ಮೇ ।"

ರುದ್ರನೇ! ನನ್ನಲ್ಲಿ ಅನುಮೋದನಾಪೂರ್ವಕವಾಗಿ ಅರ್ಥಾತ್ ಅನುಗ್ರಹ ಮಾಡಲು ಬರುತ್ತಿರುವ ಪಿತೃವಿನ ಸಮೀಪದಲ್ಲಿ ಪುತ್ರನು ನಮಸ್ಕರಿಸುವಂತೆ ನಮಸ್ಕರಿಸುತ್ತಾನೆ. ನೀನು ಅಧಿಕವಾಗಿ ಕೊಡುವವನೂ, ಸತ್ಯಪ್ರಭು. ಅದಕ್ಕಾಗಿ ನಿನ್ನನ್ನು ಸ್ತೋತ್ರ ಮಾಡುತ್ತೇನೆ. ಅಂತಹ ನೀನು ನಮಗೆ ಔಷಧಿಗಳನ್ನು ಕೊಡು.

೧೩. "ಯಾ ವೋ ಭೇಷಜಾ .................... ರುದ್ರಸ್ಯ ವಶ್ಮಿ ।"

ಮರುತ್ತುಗಳೇ! ನಿಮ್ಮಲ್ಲಿ ಯಾವುದು ಶುದ್ಧ ಔಷಧಿಗಳಿವೆಯೋ, ಯಾವುವು ಸುಖಕರವಾಗಿವೆಯೋ, ಯಾವುದರಿಂದ ಉಪಕಾರವಾಗುತ್ತವೆಯೋ, ನಮ್ಮ ತಂದೆಯಾದ ಮನುವೂ ಯಾವುದನ್ನು ಆಯ್ಕೆಮಾಡಿದನೋ, ಅವುಗಳನ್ನು ರುದ್ರನ ಚಿಕಿತ್ಸೆಯಲ್ಲಿ ಬಯಸುತ್ತೇನೆ.

ವಿ.ಸೂ. : ಮಾನವಕುಲದ ಮೂಲಪುರುಷನಾದ ಮನುವನ್ನೇ ಅಲ್ಲಲ್ಲಿ 'ಪಿತೃ' ಎಂದು ಹೇಳಿರುವುದು ಗಮನಾರ್ಹ. ಶ್ರೀಮದ್ಭಾಗವತ ನವಮಸ್ಕಂಧದಲ್ಲಿ ವೈವಸ್ವತ ಮನುವೇ ಸತ್ಯವ್ರತ, ಅವನೇ ಶ್ರಾದ್ಧದೇವ, ಪಿತೃಗಳಿಗೆ ಯಜಮಾನನೆಂದು ಹೇಳಿದೆ.

೧೪. "ಪರಿಣೋ ಹೇತಿ .................... ತನಯಾಯ ಮೃಳ ।"

ರುದ್ರನ ಆಯುಧವು ನಮ್ಮ ಮೇಲೆ ಪ್ರಯೋಗವಾಗದೇ ಮುಂದೆ ಸಾಗಲಿ. ಆ ಅತ್ಯುಗ್ರನ ದುರ್ಬುಧಿ ಎಂದರೆ ಕೋಪ ಇತ್ಯಾದಿ ನಮ್ಮನ್ನು ಬಿಟ್ಟು ಹೋಗಲಿ.

ಎಲೈ ಸ್ವಾಮಿಯೇ! ಪೋಷಣೆ ಮಾಡುವವರಿಗೋಸ್ಕರ ನಿನ್ನ ದೃಢವಾದ ಆಯುಧವನ್ನು ಸಡಿಲಿಸು. ಉದಾರಶೀಲನೇ! ನಮ್ಮ ಮಕ್ಕಳ ಹಾಗೂ ಸಂತತಿಯ ಬಗ್ಗೆ ಅನುಗ್ರಹ- ವನ್ನು ತೋರಿಸು.

**೧೫. "ಏವಾ ಬಭ್ರೋ .................... ಸುವೀರಾಃ ।"**

ಬಭ್ರುವರ್ಣ ವಿಶಿಷ್ಟನೇ! ಅತಿಪ್ರಸಿದ್ಧ ವೃಷಭನೇ! ನೀನು ಕುಪಿತನಾಗದಿರು- ವಂತೆ, ನಮ್ಮನ್ನು ಸಂಹರಿಸದಿರುವಂತೆ, ನಮ್ಮ ಸ್ತೋತ್ರಗಳನ್ನು ಶ್ರವಣಮಾಡು. ನಾವು ನಮ್ಮ ಪುತ್ರರೊಡಗೂಡಿ ದೇವಪೂಜೆಯಲ್ಲಿ ಈ ಸೂಕ್ತಗಳನ್ನು ಚೆನ್ನಾಗಿ ಪಠಿಸುತ್ತೇವೆ.

(ಹೀಗೆ 'ಮಹೇಶಾತ್ ಜ್ಞಾನಮನ್ವಿಕ್ಷೇತ್ ಭಾಗ. ಸಂ. ೭ ಇತ್ಯಾದಿ' ಯಂತೆ ಪರಮಾತ್ಮನ ಜ್ಞಾನಕ್ಕೆ ರುದ್ರನ ಸ್ತೋತ್ರವೂ ಅವಶ್ಯಕವೆಂದು ತಿಳಿಯುತ್ತದೆ).

**(ಮುಂದುವರೆಯುವುದು)**


## ಶ್ರೀರಘುನಂದನ ವಿದ್ಯಾಪೀಠಕ್ಕೆ ಪ್ರವೇಶಾವಕಾಶ

ಆಧುನಿಕ ವಿದ್ಯಾಭ್ಯಾಸದೊಂದಿಗೆ ಪ್ರಾಚೀನ ವಿದ್ಯಾಭ್ಯಾಸ

ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನಂಜನಗೂಡಿ- ನಲ್ಲಿ ಪ್ರಾರಂಭಿಸಲಾಗಿರುವ ಮೇಲ್ಕಂಡ ವಿದ್ಯಾಪೀಠಕ್ಕೆ ೨೦೦೭-೨೦೦೮ ರ ಪ್ರವೇಶಾವಕಾಶಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಗುರುಕುಲದಲ್ಲಿ ಆಧುನಿಕ ವಿದ್ಯಾಭ್ಯಾಸದೊಂದಿಗೆ ಪ್ರಾಚೀನ ವಿದ್ಯೆಗಳನ್ನು ಕಲಿಸಿಕೊಡಲಾಗುವುದು. (ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಸರ್ಕಾರದ ಪಠ್ಯಕ್ರಮ) ಶಾಲೆಯ ಜೊತೆಯಲ್ಲಿ ಮಂತ್ರ, ವೇದ, ಸಂಸ್ಕೃತ ಹಾಗೂ ಶಾಸ್ತ್ರಾಭ್ಯಾಸವನ್ನು ನುರಿತ ವಿದ್ವಾಂಸರಿಂದ ಹೇಳಿಕೊಡಲಾಗುವುದು.

೧ ನೇ ತರಗತಿಯಿಂದ ೭ ನೇ ತರಗತಿಯ ವಿದ್ಯಾರ್ಥಿಗಳವರೆಗೆ ಪ್ರವೇಶಾವಕಾಶ.

**"ಪ್ರವೇಶಾವಕಾಶ ಉಚಿತ"**

**ಸಂಪರ್ಕಿಸಿ : ಗುರುಕುಲ, ನಂಜನಗೂಡು - 08221-228544**

**ಸಂಚಾರಿ ದೂರವಾಣಿ - 9342651516**






# ಕೂಡಲಿ ಆರ್ಯ ಅಕ್ಷೋಭ್ಯ ಮಠದ ಶ್ರೀಸುಲಭತೀರ್ಥರ ಬೃಂದಾವನ ಪತ್ತೆ


■ ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ಸಂತೇಬೆನ್ನೂರು - ೫೭೭೫೫೨


ಸರ್ವಜ್ಞಪೀಠವನ್ನಾಳಿದ ಶ್ರೀಅಕ್ಷೋಭ್ಯತೀರ್ಥರು ಶ್ರೀಮನ್ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಲ್ಲಿ ಕೊನೆಯವರು. ಇವರು ಮಧ್ವಮತ ಪ್ರಚಾರಕ್ಕಾಗಿ ಅತ್ಯಮೂಲ್ಯವಾದ ಮಹತ್ಕಾರ್ಯಗಳನ್ನು ನೆರವೇರಿಸಿದುದು ಕಂಡುಬರುತ್ತದೆ. ಅವುಗಳಲ್ಲಿ ದ್ವೈತಸಿದ್ಧಾಂತ ಪ್ರಚಾರಕ್ಕಾಗಿ ಇಂದಿನ ಶಿವಮೊಗ್ಗಾ ಜಿಲ್ಲೆಯ ತುಂಗಭದ್ರಾ ಸಂಗಮ ಕ್ಷೇತ್ರವಾದ ಕೂಡಲಿ- ಯಲ್ಲಿ 'ಮಾಧ್ವಪೀಠ'ವೊಂದನ್ನು ಸ್ಥಾಪಿಸಿ ಅದರ ಪೀಠಾಧಿಕಾರಿ- ಗಳನ್ನಾಗಿ "ಶ್ರೀತ್ರೈಲೋಕ್ಯ ಭೂಷಣ ತೀರ್ಥ"ರೆಂದು ನಿಯಮಿಸಿ ಹೊಸ ಮಧ್ವಪರಂಪರೆಯ ಪೀಠಕ್ಕೆ ನಾಂದಿ ಹಾಕಿ ಹತ್ತಿರದಲ್ಲಿದ್ದ ಕೂಡಲಿ ಶೃಂಗೇರಿ ಮಠದ ಅದ್ವೈತಸಿದ್ಧಾಂತಕ್ಕೆ ಪ್ರಬಲ ಸ್ಪರ್ಧೆ ಒಡ್ಡಲು ಕಾರಣೀ- ಭೂತರಾದರು. ಅಕ್ಷೋಭ್ಯತೀರ್ಥ- ರಿಂದ ಹೀಗೆ ಪ್ರಾರಂಭವಾದ ಸಂಸ್ಥಾನಕ್ಕೆ ವಿಜಯನಗರದ ಅರಸು ಶ್ರೀಕೃಷ್ಣ ದೇವರಾಯನ ಕಾಲದಲ್ಲಿ "ಕೂಡಲಾರ್ಯ ಮಠ" ಎಂದು ಸಂಬೋಧಿಸಿ ತಾಮ್ರಪತ್ರ ಬರೆದು ಕೊಟ್ಟ ಕಾರಣ, ಮುಂದೆ "ಕೂಡಲಿ ಆರ್ಯ ಅಕ್ಷೋಭ್ಯ ಸಂಸ್ಥಾನ" ಎಂದೇ ಪ್ರಚಾರವಾಯಿತು. ಈ ವರೆಗೆ

ಹರಿಹರ ಸಮೀಪ ಹನಗವಾಡಿ ಗ್ರಾಮದಲ್ಲಿ ದೊರೆತ ಶ್ರೀಸುಲಭತೀರ್ಥರ ಬೃಂದಾವನದ ಶಿಲೆ

ಮೂವತ್ತೊಂದು ಜನ ಯತಿಗಳು ಒಬ್ಬರಾದ ಮೇಲೆ ಒಬ್ಬರು ಪೀಠದಲ್ಲಿ ವಿರಾಜಮಾನರಾಗಿದ್ದಾರೆ. ಅವರಲ್ಲಿ ಇಪ್ಪತ್ತೊಂಭತ್ತು ಜನ ಯತಿಗಳು ಈಗಾಗಲೇ ಪರಂಧಾಮವನ್ನೈದಿದ್ದು, ಅವರೆಲ್ಲರ ಮೂಲ ಬೃಂದಾವನಗಳು ಹರಿಪಾದ ಸೇರಿದ ಸ್ಥಳಗಳ ಬಗ್ಗೆ ನಿಖರವಾಗಿ ಮಾಹಿತಿಗಳು ಈ ವರೆಗೂ ದೊರೆತಿಲ್ಲ. ಮಠದ ಕೇಂದ್ರಸ್ಥಾನವಾದ ಕೂಡಲಿಯಲ್ಲಿ ಹದಿನೆಂಟು ಜನ ಯತಿಗಳ ಮೂಲ ಬೃಂದಾವನ ಮಾತ್ರ ಇವೆ. ಉಳಿದಂತೆ ಶ್ರೀರಘುಕಾಂತತೀರ್ಥರ (೨೫ ನೇಯವರು) ಮೂಲ ಬೃಂದಾವನ ಮಳಖೇಡದಲ್ಲಿಯೂ, ಶ್ರೀರಘುದಾಂತತೀರ್ಥರ (೨೬ ನೇಯವರು) ಮೂಲ ಬೃಂದಾವನ ಯಾದಗಿರಿಯಲ್ಲಿಯೂ ಇದ್ದು, ಶೂರ್ಪಾಲಿಯಲ್ಲಿದ್ದ ಶ್ರೀರಘುಪತಿತೀರ್ಥರ (೨೯ ನೇಯವರು) ಮೂಲ ಬೃಂದಾವನ ಮುಳುಗಡೆಯಾಗುವ ಕಾರಣ, ಅಲ್ಲಿಂದ ಬೃಂದಾವನವನ್ನು ಮೂಲಮೃತ್ತಿಕಾ, ದೇಹ ಸಮೇತ ಕೂಡಲಿಗೆ ತಂದು ಪುನಃ ಪ್ರತಿಷ್ಠಾಪಿಸಲಾಗಿದೆ. ಉಳಿದಂತೆ ಈ ಪರಂಪರೆಯ ಎಂಟು ಯತಿಗಳ ಬೃಂದಾವನ ಎಲ್ಲಿದೆ ಎಂಬುದು ಇದುವರೆಗೂ ಅಧಿಕೃತವಾಗಿ ತಿಳಿದುಬಂದಿರಲಿಲ್ಲ.

ಶ್ರೀಮಠದ ದಾಖಲೆಯಂತೆ ಈ ಪರಂಪರೆಯ ಮೂರನೆಯ ಯತಿಗಳಾದ ಶ್ರೀಸುಲಭತೀರ್ಥರು, ಅವರ ಶಿಷ್ಯರಾದ ಶ್ರೀರಘುಪುಂಗವತೀರ್ಥರು ತುಂಗಭದ್ರಾ - ಹರಿದ್ರಾ ಸಂಗಮ ಸ್ಥಳದಲ್ಲಿ ಬೃಂದಾವನಸ್ಥರಾದರೆಂಬ ಮಾಹಿತಿ ಮಾತ್ರ ಇತ್ತು. ಈ ಮಾಹಿತಿಯ ಆಧಾರದ ಮೇಲೆ ವೇ. ವರದಾಚಾರ್ಯ ಮತ್ತು ಬಳಗದವರು ಹರಿಹರದ ಆಸುಪಾಸಿನ ಗ್ರಾಮದಲ್ಲಿ ವಿಚಾರಣೆ ನಡೆಸಿದಾಗ ಈಗ ಸೂಳೆಕೆರೆ ಹಳ್ಳ ಎಂದು ಕರೆಯಲ್ಪಡುವ, ಹಿಂದೆ ಹರಿದ್ರಾ ಎಂದು ಕರೆಯುತ್ತಿದ್ದ ಹಳ್ಳದ ದಂಡೆಯಲ್ಲಿರುವ ಹನಗವಾಡಿ ಎಂಬ ಗ್ರಾಮದಲ್ಲಿ ಒಂದು ಬರಡಾದ ಗ್ರಾನೈಟ್ ಶಿಲೆಯಲ್ಲಿ ವೈಷ್ಣವ ಚಿಹ್ನೆಗಳಾದ ಶಂಕ-ಚಕ್ರ, ಮೇಲೆ ಸೂರ್ಯ-ಚಂದ್ರ ಇರುವ ಕಲ್ಲು ಪತ್ತೆಯಾಗಿದೆ. ಅದರ ಮೇಲೆ ಅಸ್ಫುಟವಾಗಿ ಬರೆದ ನಂದಿನಾಗರಿ ಲಿಪಿಯೂ ಇದೆ. ಅದನ್ನು ಶಿವಮೊಗ್ಗಾ ಜಿಲ್ಲೆಯ ಕೆಳದಿಯ ಸಂಶೋಧಕ ಡಾ. ಜಿ.ವಿ. ಕೊಲ್ಹಾಪುರ ರವರು ನನ್ನ ಗಮನಕ್ಕೆ ತಂದಾಗ ಇದನ್ನು ಇನ್ನಷ್ಟು ಪರಿಶೀಲನೆಗೆ ಒಳಪಡಿಸಿದೆವು. ಆಗ ಶಿವಮೊಗ್ಗಾ ಸಂಶೋಧಕ ಡಾ. ಜಗದೀಶ್ ರವರು ಶಿಲೆಯಲ್ಲಿರುವ ಬರಹವನ್ನು ಓದಿ **"ಸುಲಭ ತೀ"** ಎಂದು ಇರುವುದಾಗಿ ದೃಢಪಡಿಸಿದರು. ವಿದ್ವಾಂಸರ ಅಭಿಮತದಂತೆ **ಇದು ಕೂಡಲಿ ಆರ್ಯ ಅಕ್ಷೋಭ್ಯ ಮಠದ ಮೂರನೆಯ ಪೀಠಾಧಿಪತಿಗಳಾದ ಶ್ರೀಸುಲಭತೀರ್ಥರದ್ದೇ ಎಂಬ ನಿರ್ಣಯಕ್ಕೆ ಬರಲಾಗಿದೆ.** ಈಗಿರುವ



ಶಿಲೆಯನ್ನು ಮೂಲಸ್ಥಳದಿಂದ ಕೆಲವೇ ಅಡಿ ಮೇಲ್ಭಾಗಕ್ಕೆ ಸ್ಥಳಾಂತರಿಸುವುದಾಗಿ ಗ್ರಾಮಸ್ಥರಿಂದ ತಿಳಿದುಬಂದಿದೆ. ಇದೂ ಅಲ್ಲದೆ, ಈ ಶಿಲೆ ದೊರೆತಿರುವ ಹನಗವಾಡಿ ಗ್ರಾಮದ ಸರ್ವೇ ನಂ. ೬೪ ರ ಜಮೀನಿನಲ್ಲಿ ಕೆಲವರ್ಷಗಳ ಹಿಂದೆ ಹರಿಹರದಿಂದ ಬ್ರಾಹ್ಮಣರು ಬಂದು ಪೂಜೆ, ನೈವೇದ್ಯ ಮಾಡಿಹೋಗುತ್ತಿದ್ದರೆಂದು ಗ್ರಾಮಸ್ಥರು ಹೇಳುತ್ತಾರೆ. ಹಾಗಾಗಿ ಇದು ವೈಷ್ಣವ ಯತಿಗಳ ಬೃಂದಾವನ ಸ್ಥಳ ಎಂಬ ಮಾತಿಗೆ ಹೆಚ್ಚು ಪುಷ್ಟಿ ಕೊಡುತ್ತದೆ.

ಮಾಧ್ವ ಪದ್ಧತಿಯಂತೆ ಮೊದಲು ಮೃತ್ತಿಕಾ ಬೃಂದಾವನ ಮಾಡಿ ತಾತ್ಕಾಲಿಕವಾಗಿ ಈ ಗ್ರಾನೈಟ್ ಶಿಲೆ ನಿಲ್ಲಿಸಿರಬಹುದು. ಏನು ಕಾರಣವೋ ಏನೋ ಶಿಲಾ ಬೃಂದಾವನ (ಎಲ್ಲಾ ಬೃಂದಾವನಗಳಂತೆ) ಮಾಡದೇ ಬಿಡಲಾಗಿದೆ. ಈ ನೆಲೆಯ ಸಮೀಪದಲ್ಲಿಯೇ ಇನ್ನೊಂದು ತಾಣವಿದ್ದು, ಅದು ಶ್ರೀಸುಲಭತೀರ್ಥ ಶಿಷ್ಯರಾದ ಶ್ರೀರಘುಪುಂಗವತೀರ್ಥರು ಬೃಂದಾವನಸ್ಥರಾದ ಸ್ಥಳವಾಗಿರಬೇಕೆಂಬ ಮಾತು ಕೇಳಿ ಬರುತ್ತಿದೆ. ಇದು ಇನ್ನಷ್ಟು ಸಂಶೋಧನೆಯಿಂದ ದೃಢಪಡಬೇಕಿದೆ.

❑❑

## ರಿತ್ತಿ ಸುಬ್ಬಣ್ಣಾಚಾರ್ಯ ನಿಧನ

ಶ್ರೀ ರಿತ್ತಿ ಸುಬ್ಬಣ್ಣಾಚಾರ್ಯರು ದಿನಾಂಕ ೨೧-೦೩-೨೦೦೭ ರಂದು ವಿಧಿವಶರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಅನೇಕ ವರ್ಷಗಳ ಕಾಲ ರಿತ್ತಿಯ ಶ್ರೀಧೀರೇಂದ್ರತೀರ್ಥರ ಸೇವಕೆಯನ್ನು ಕೈಗೊಂಡು ಪರ್ಯಾಯಸ್ಥರೆನಿಸಿಕೊಂಡು ತಮ್ಮ ಸಾರ್ಥಕ ಜೀವನವನ್ನು ಪೂರೈಸಿಕೊಂಡವರು. ಪರಮಪೂಜ್ಯ ಶ್ರೀಸುಯಮೀಂದ್ರತೀರ್ಥ ಶ್ರೀಪಾದಂಗಳವರ ಅಣತಿಯಂತೆ ಸುಮಾರು ೨೫ ವರ್ಷಗಳ ಕಾಲ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಉನ್ನತ ಹುದ್ದೆಯನ್ನಲಂಕರಿಸಿ ಶ್ರೀರಾಯರನ್ನು ಪರಿಪರಿಯಾಗಿ ಸೇವಿಸಿ ಸುಮಾರು ೨೦ ವರ್ಷಗಳ ಕಾಲ ಶ್ರೀರಾಯರ ಮೂಲ ಬೃಂದಾವನದ ಪೂಜಾಕೈಂಕರ್ಯವನ್ನು ನೆರವೇರಿಸಿ, ಪ್ರತಿದಿನವೂ ರಾಯರನ್ನು ಸ್ಪರ್ಶಿಸಿ, ಹಸ್ತೋದಕ - ಮಹಾಮಂಗಳಾರತಿ ಮುಂತಾದವುಗಳನ್ನು ನೆರವೇರಿಸಿದ ಪುಣ್ಯಶಾಲಿಗಳು. ಶಾಂತಸ್ವಭಾವದವರೂ, ಸಜ್ಜನರೂ, ಸಾತ್ವಿಕರೂ ಆದ ಶ್ರೀ ರಿತ್ತಿ ಸುಬ್ಬಣ್ಣಾಚಾರ್ಯರ ಅಗಲಿಕೆಯಿಂದ ಶ್ರೀಮಠದ ಸಂಪ್ರದಾಯ - ಪದ್ಧತಿಗಳನ್ನರಿತಿದ್ದ ಸಾತ್ವಿಕರೊಬ್ಬರನ್ನು ಶ್ರೀಮಠ ಕಳೆದುಕೊಂಡಂತಾಗಿದೆ. ಇವರ ಚೇತನಕ್ಕೆ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ಸದ್ಗತಿಯನ್ನು ನೀಡಲೆಂದು ಶ್ರೀಗುರುಸಾರ್ವಭೌಮ ಪತ್ರಿಕಾ ಬಳಗವು ಪ್ರಾರ್ಥಿಸುತ್ತದೆ. **- ಸಂ.**

ಲೇಖನಾಂಕ

ಭಾರತಪುಷ್ಪ - ೧

# ಮಹಾಭಾರತದಲ್ಲಿ ಭೀಷ್ಮರ ಸ್ಥಾನ

■ ವಿದ್ವಾನ್ ಶ್ರೀ ವಿ. ರಮೇಶಾಚಾರ್ಯ

'ಗೌತಮ ಕೃಪ', ಆಚಾರ್ಯ ಸ್ಟ್ರೀಟ್, ತುಮಕೂರು - ೫೭೨ ೧೦೧

ಹಿಂದಿನ ಸಂಚಿಕೆಯಿಂದ.......

## ಭೀಷ್ಮರ ಅಸದೃಶ ಪಿತೃಭಕ್ತಿ ದ್ಯೋತಕ ಪ್ರತಿಜ್ಞೆಯ ಪೀಠಿಕೆ

ತಂದೆಗೆ ಅನುರೂಪನೂ, ಸಕಲ ಶಸ್ತ್ರ, ಅಸ್ತ್ರ, ಶಾಸ್ತ್ರಕುಶಲನೂ ಆದ ಭೀಷ್ಮನನ್ನು (ದೇವವ್ರತ) ಶಂತನು ಚಕ್ರವರ್ತಿಯು ಯುವರಾಜನಾಗಿ ಪಟ್ಟಾಭಿಷೇಕ ಮಾಡಿದ್ದಾನೆ. ಹೀಗೆ ಗೋ, ಧನ ಸಮೃದ್ಧಿಯಾದ ರಾಜ್ಯದಲ್ಲಿ ಸುಖದಿಂದಿರಲು ಒಮ್ಮೆ ಶಂತನವು ಬೇಟೆಗಾಗಿ ಕಾಡಿಗೆ ಹೋಗಿದ್ದಾನೆ. ವನದಲ್ಲಿ ಸಂಚರಿಸುವಾಗ ಯಮುನೆಯ ಸುಂದರ ತಾಣ, ಇದ್ದಕ್ಕಿದ್ದಂತೆ ಸುಗಂಧೋಪೇತ ವಾಸನೆ, ರಾಜನಿಗೆ ಆಶ್ಚರ್ಯ, ಏನಿರಬಹುದು ? ಸುಗಂಧವನ್ನೇ ಅನುಸರಿಸಿ ಹೋಗಿದ್ದಾನೆ. ಗಂಧವನ್ನು ಸೂಸುವ ದೇವತಾ ಶರೀರದಂತಿರುವ ಸುಂದರವಾದ ದಾಶಕನ್ಯೆ (ಬೆಸ್ತಕನ್ಯೆ)ಯ ನೋಡಿದ್ದಾನೆ, ತಂದೆಯ ಆಜ್ಞೆಯಂತೆ 'ನಾವೆ' ನಡೆಸುವ ಕನ್ಯೆ. ಆಗ ಶಂತನು ಕೇಳಿದ್ದಾನೆ, ನೀನು ಯಾರು ? ವಿವಾಹವಾಗುವ ಇಚ್ಛೆಯಿದೆ. ಒಪ್ಪಿಗೆಯಾ ? ಕನ್ಯೆ ತಾನು ಮನಸ್ಸಿನಲ್ಲಿ ಒಪ್ಪಿದ್ದರೂ ತಂದೆಯನ್ನು ಕೇಳಬೇಕೆಂದು ತಂದೆಯಲ್ಲಿಗೆ ಹೋಗಿ ವಿಚಾರ ತಿಳಿಸಿದಳು. ತಂದೆ ವಿಚಾರ ಮಾಡಿದ. ಈಗಾಗಲೇ ಒಬ್ಬ ವಂಗ ದೇವವ್ರತ ಯುವರಾಜನ ಸ್ಥಾನದಲ್ಲಿದ್ದಾನೆ. ಈಕೆಯಲ್ಲಿ ಹುಟ್ಟುವ ಮಕ್ಕಳಿಗೆ ರಾಜ್ಯ ಬರುವುದಿಲ್ಲವೆಂದು ಯೋಚಿಸಿ ಈಕೆಯಲ್ಲಿ ಹುಟ್ಟುವ ಮಗನಿಗೆ ರಾಜ್ಯ ಕೊಡುವುದಾದರೆ ಮಗಳನ್ನು ಕೊಡುವುದಾಗಿ ಹೇಳಿದ. ವಿಚಾರಮಾಡಿ ತಿಳಿಸುತ್ತೇನೆಂದು ಅರಮನೆಗೆ ಶಂತನು ವಾಪಸ್ಸು ಬಂದಿದ್ದಾನೆ. ಚಿಂತಾಮಗ್ನ, ತಂದೆಯ ಮುಖ ನೋಡಿ ಮಗನಿಂದ ಪ್ರಶ್ನೆ - ಏಕೆ ಚಿಂತೆ ? ನಡೆದ ವೃತ್ತಾಂತವನ್ನೆಲ್ಲ ಮಗನಿಗೆ ತಿಳಿಸಿದ. ಮಗನಿಗೆ ತಂದೆಯ ಉದ್ವಿಗ್ನತೆ, ಚಿಂತೆ ನಿವಾರಿಸಲು ಕಾತುರ.

## ಶಂತನು ಕಾಮಪಿಪಾಸುವೇ ?

ಮೇಲ್ಕಂಡ ಘಟನೆ ಕೇಳಿದಾಗ ಗಂಗೆಯಂತಹ ದೇವತುಲ್ಯ ಶರೀರದ ಭೋಗ ಮಾಡಿದ ವರುಣ ಅಂಶ ಸಂಜಾತನಾದ, ದೇವವ್ರತನಂತಹ ವಯಸ್ಸಿಗೆ ಬಂದ



ಯೋಗ್ಯ ಮಗನಿರುವಾಗ ವೃದ್ಧಾನಾದ ಶಂತನು ದಾಶಕನ್ಯೆಯನ್ನು ನೋಡಿ ಮೋಹಗೊಂಡನೆ ? ಕಾಮಾತುರನಾದನೆ ? ದೇವತಾಂಶಸಂಭೂತರಲ್ಲಿ ಇಂತಹ ತುಚ್ಛಗುಣ ಸಾಧ್ಯವೆ ? ಹಾಗಾದರೆ ದಾಶಕನ್ಯೆಯನ್ನು ನೋಡಿ ವಿವಾಹವಾಗಲು ಏಕೆ ಇಚ್ಛಿಸಿದ ? ಕೆಲವು ವಿದ್ವಾಂಸರು ವೃದ್ಧನಾದ ಶಂತನುವಿನ ವೃದ್ಧಾಪ್ಯದಲ್ಲೂ ಹಿಂಗದ ಕಾಮಪಿಪಾಸೆ ಎಂದು ವಿಮರ್ಶಿಸುವರು. ಇದು ವರುಣನಂತಹ ದೇವತೆಗೆ ಉಚಿತವೇ ? ಇದಕ್ಕೆ ಉತ್ತರವನ್ನು ಭಾರತದಲ್ಲೇ ನೋಡೋಣ -

## ಶಂತನುವಿನ ಉದಾತ್ತ ಚಿಂತನೆ

ವೃದ್ಧನಾದ ಶಂತನು ತನ್ನ ಮನೋಗತವನ್ನು ಮಗನಾದ ದೇವವ್ರತನ ಮುಂದೆ ಇಟ್ಟಾಗ ತಾನೇ ಮಗನ ಮುಂದೆ ನಿರ್ವ್ಯಾಜವಾಗಿ ತನ್ನ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಬಹಿರಂಗಪಡಿಸುತ್ತಾನೆ. ನಾನು ಮರುಮದುವೆ ಆಗಲು ಕಾರಣಗಳು ಈ ರೀತಿ ಇವೆ. ಆದಿಪರ್ವದ ಮೂರನೇ ಅಧ್ಯಾಯದಲ್ಲಿ ''ಹೇ ದೇವವ್ರತ, ಇಂತಹ ಮಹತ್ತರವಾದ ಕುರುವಂಶದಲ್ಲಿ ನಾನು ಬಂದಿದ್ದು ಈ ವಂಶವನ್ನು ಬೆಳಗುವ ಜವಾಬ್ದಾರಿ ನಿನ್ನ ಮೇಲಿದೆ. ನೀನೊಬ್ಬನೇ ಈಗ ವಂಶದ ಕುಡಿ. ಆದರೆ ಮುಂದೆ ನಿನಗೇನಾದರೂ ವಿಪತ್ತು (ದೈವವಶಾತ್) ಬಂದರೆ ಈ ವಂಶದ ಗತಿ ಏನು ? ನಿಲ್ಲುವ ಪ್ರಸಂಗ ಉಂಟಾಗಬಹುದು. ಒಬ್ಬ ಮಗ ಮಗನಲ್ಲ, ಒಂದು ಕಣ್ಣು ಕಣ್ಣಲ್ಲ. ಒಂದು ಕಣ್ಣಿರುವವನ ಕಣ್ಣು ಹೋದರೆ ದೇಹವೇ ಹೋದಂತೆ, ಒಬ್ಬ ಪುತ್ರ ನಾಶವಾದರೆ ಕುಲವೇ ನಾಶವಾದಂತೆ. ಕುಲನಾಶವಾದರೆ ಅಗ್ನಿಹೋತ್ರ, ತ್ರಯೀವಿದ್ಯಾ (ವೇದವಿದ್ಯೆಯ ಪರಂಪರೆ) ಎಲ್ಲವೂ ನಾಶ, ಹಾಗಾಗಬಾರದು. ಉತ್ತಮ ಸಂತಾನಗಳಿಂದ ವಂಶ, ಅಗ್ನಿಹೋತ್ರ, ವೇದವಿಷಯ ಪರಂಪರೆ ಅಕ್ಷಯವಾಗಿರಬೇಕು. ಇದು ಧರ್ಮವಾದಿಗಳು ಹೇಳಿದ ಸತ್ಯವಾದ ಮಾತು. ಅದಕ್ಕೋಸ್ಕರ ನನ್ನ ವಿವಾಹದ ಇಚ್ಛೆಯೇ ಹೊರತು ಕಾಮಪಿಪಾಸೆಗಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. "**ಕಥಂಚಿತ್ ತವ ಗಾಂಗೇಯ ವಿಪತ್ತೌ ನಾಸ್ತಿ ನಃ ಕುಲಮ್ । ಅಸಂಶಯಂ ತ್ವಮೇವೈಕಃ ಶತಾದಪಿ ಪರಃ ಸುತಃ । ನಚಾಪ್ಯಹಂ ವೃಧಿ ಭೂಯೋ ದಾರಾನ್ ಕರ್ತುಮಿಹೋತ್ಸಹೇ । ಸಂತಾನಸ್ಯ ಅವಿನಾಶಾಯ ಕಾಮಯೇ ಭದ್ರಮಸ್ತು ತೇ । ಅನಪತ್ಯೇತ್ಯೈಕಪುತ್ರತ್ವಮಿತ್ಯಾಹುಃ ಧರ್ಮವಾದಿನಃ । ಅಗ್ನಿಹೋತ್ರಂ ತ್ರಯೀ ವಿದ್ಯಾ ಸಂತಾನಮಪಿ ವಾಕ್ಷಯಮ್ । ಸರ್ವಾಣ್ಯೇತಾನ್ಯಪತ್ಯಸ್ಯ ಕಲಾಂ ನಾರ್ಹಂತಿ ಷೋಡಶೀಮ್ । ......... ಇತಿ ತೇ ಕಾರಣಂ ತಾತ ದುಃಖಸ್ಯೋಕ್ತಮ್ ಅಶೇಷತಃ ॥**"

ವೃದ್ಧನಾದ ಶಂತನು ತನ್ನ ಕಾಮಪಿಪಾಸೆಗೋಸ್ಕರ ಮಗನ ಮುಂದೆ ಜನ ಆಡಿಕೊಂಡಾರು ಎಂದು ಧರ್ಮಶಾಸ್ತ್ರದ ಸೋಗು ಏಕೆ ಹಾಕಿರಬಾರದು ? (ಆಧುನಿಕರ

ಸಂಶಯ) ಹಾಗೊಂದು ವೇಳೆ ಕಾಮಪಿಪಾಸುವಾಗಿದ್ದರೆ, ಭೋಗಕ್ಕೋಸ್ಕರವೇ ಜೀವಿಸುವವನಾದರೆ ಗಂಗೆ ದೇವಲೋಕ ಪ್ರವೇಶ ಮಾಡಿದ ನಂತರವೇ ಪುನರ್ವಿವಾಹ ಆಗಬಹುದಿತ್ತು. ಒಂದೇನು ಕ್ಷತ್ರಿಯೋಚಿತವಾಗಿ ಅನೇಕ ಸುಂದರ ಕನ್ಯಾಮಣಿ-ಗಳನ್ನು ವಿವಾಹ ಆಗಬಹುದಿತ್ತು. ಶಂತನು ಹಾಗೆ ಮಾಡಿರುವುದು ಭಾರತದಲ್ಲಿ ಕಂಡುಬಂದಿಲ್ಲ. ಹಾಗೆ ಕಾಮಪಿಪಾಸುವಾಗಿದ್ದರೆ ಮನಸ್ಸಿನಲ್ಲೇ ಕಾಮಾಚಾರ-ವುಳ್ಳವನಾಗಿ ದಾಶಕನ್ಯೆ ನೋಡುವ ತನಕ ವೃದ್ಧಾಪ್ಯದವರೆವಿಗೂ ಏಕೆ ಕಾಲ ದೂಡಿದ? ಹಾಗೆ ದುಷ್ಟ ಮನಸ್ಸಿದ್ದರೆ ಸುಖದಿಂದ ಅಷ್ಟು ವರ್ಷ ರಾಜ್ಯಭಾರ ನಡೆಸಿದ ಎಂದು ಭಾರತ ವರ್ಣಿಸುತ್ತಿರಲಿಲ್ಲ. (ಮನಸ್ಸು ದೂಷಿತವಾಗಿದ್ದರೆ ಸುಖ ಎಲ್ಲಿರುತ್ತದೆ? ದುರ್ಯೋಧನನಿಗೆ ಸಕಲ ಐಶ್ವರ್ಯವಿದ್ದರೂ ಮನಸ್ಸಿನಲ್ಲಿ ಪಾಂಡವರದೇ (ಹತ್ಯೆಯ ಚಿಂತೆ) ಚಿಂತೆ ಇದ್ದುದರಿಂದ ಸುಖಪಟ್ಟನೆ?) ಹಾಗೊಂದು ವೇಳೆ ಉತ್ಕಟ ಕಾಮದ ಇಚ್ಛೆ ಇದ್ದರೆ ದಾಶರಾಜ ಕರಾರು ಹೇಳಿದ ತಕ್ಷಣ ಒಪ್ಪಿ ಭೋಗಮಾಡಬಹುದಿತ್ತು. ಹೇಗಿದ್ದರೂ ಮಾತು ಕೇಳುವ ಮಗ ದೇವವ್ರತ, ತಂದೆಗೆ ಹೆದರುವವನು. ಅವನನ್ನು ಒಪ್ಪಿಸಿದರಾಯಿತು ಎಂಬ ಧೋರಣೆಯಿಂದ ತಕ್ಷಣ ಗಾಂಧರ್ವವಿಧಿಯಿಂದ ಮದುವೆ ಆಗಬಹುದಿತ್ತು. **'ಕಾಮಾತುರಣಾಂ ನ ಭಯಂ ನ ಲಜ್ಜಾ'** ಅಲ್ಲವೆ? ಆದರೂ ಶಂತನು ಕರಾರಿಗೆ ಒಪ್ಪದೆ ವಿಚಾರಮಾಡಿ ತಿಳಿಸುತ್ತೇನೆ ಎಂದು ಮನೆಗೆ ಬಂದಿದ್ದಾನೆ. (**ನಾ ಕಾಮಾಯತ ತಂ ದಾತುಂ ವರಂ ದಾಶಾನು ಶಂತನುಃ**).

ಶಂತನು ಚಕ್ರವರ್ತಿ ವರುಣನ ಅಂಶವೇ ಆದ್ದರಿಂದ ತಪಃಶಕ್ತಿಯಿಂದ ಕೂಡಿದ್ದವನು. ಆದ್ದರಿಂದ ಭವಿಷ್ಯವನ್ನು ಯೋಗಶಕ್ತಿಯಿಂದ ತಿಳಿದವನಾಗಿದ್ದು, ಮುಂದೆ ಭೀಷ್ಮನಿಗೆ ಹಿಂದಿನ ಶಾಪದೆಸೆಯಿಂದ ಗೃಹಸ್ಥಾಶ್ರಮದ ನಿರ್ಬಂಧವಿರು-ವುದರಿಂದ ಕುರುವಂಶ ಮುಂದುವರಿಯಲಿ ಎಂಬ ಉದ್ದೇಶದಿಂದಲೇ, ಕನ್ಯೆಯೂ ದೇವತಾಲಕ್ಷಣದ ಶರೀರದಂತೆ ಯೋಗ್ಯಕನ್ಯೆಯಾದ್ದರಿಂದಲೇ (**ಸ ದದರ್ಶ ತದಾ ಕನ್ಯಾಂ ದಾಶಾನಾಂ ದೇವರೂಪಿಣೀಮ್**) ವೃದ್ಧನಾದರೂ ವಂಶ ಮುಂದುವರೆಸಲು ತೀರ್ಮಾನಿಸಿದನೆಂದು ಊಹಿಸಲೂಬಹುದು. ಏಕೆಂದರೆ ಮುಂದೆ ಮಗನಿಗೆ 'ಇಚ್ಛಾಮರಣಿ'ಯಾಗುವಂತೆ ವರ ಕೊಟ್ಟಿದ್ದಾನೆ. ವರ ಕೊಡುವವರಿಗೆ ತಪಃಶಕ್ತಿ ಇರಬೇಕಷ್ಟೆ. ಇನ್ನು ಆಚಾರ್ಯರು ತಿಳಿಸಿದಂತೆ **'ಪ್ರಾಯೇಣ ಸತಾಂ ಬುದ್ಧಿಃ ನ ಪಾಪಮಾರ್ಗೇ'** ಎಂಬಂತೆ ಸತ್ಪುರುಷನಾದ ಶಂತನವು ಇದುವರೆಗೂ ತನ್ನ ಮನಸ್ಸು ಯಾವ ಕನ್ಯೆಯಲ್ಲೂ ಮೋಹಗೊಳ್ಳದೇ ಇದ್ದುದು ಇಂದು ದಾಶಕನ್ಯೆಯಲ್ಲಿ ಮೋಹಗೊಳ್ಳಬೇಕಾದರೆ ಪ್ರಬಲವಾದ ದೈವಕಾರಣವೆಂದು ಊಹಿಸಿರಲೂಬಹುದು.



ಇಷ್ಟೆಲ್ಲಾ ಸಕಾರಣಗಳು ಶಾಸ್ತ್ರದಲ್ಲೇ, ಪುರಾಣದಲ್ಲೇ ಉಕ್ತವಾಗಿರುವಾಗ ಇದನ್ನೆಲ್ಲಾ ಬದಿಗಿಟ್ಟು ನಮ್ಮ ಬುದ್ಧಿಗೆ (ನಾಸ್ತಿಕ ಬುದ್ಧಿಗೆ) ತೋರಿದಂತೆ ಕಾಮಪಿಪಾಸುವೆಂದು ಕರೆಯುವುದು, ಆರೋಪಿಸುವುದು ಎಂದೂ ಸಲ್ಲದು.

## ಭಯಂಕರ ಪ್ರತಿಜ್ಞೆಯ ಭೀಷ್ಮ

ತಂದೆಯ ಮನೋಗತವನ್ನು ತಿಳಿದ ದೇವವ್ರತ ತನ್ನ ತಂದೆಯಾದ ಶಂತನು-ವನ್ನು ಸಂತೋಷಪಡಿಸುವುದೇ ಮಗನ ಮುಖ್ಯ ಕರ್ತವ್ಯ ಎಂಬುದಾಗಿ ತಿಳಿದು ತಾನೇ ದಾಶರಾಜನ ಮನೆಗೆ ಹೋಗಿ ತಾನು ರಾಜ್ಯಸ್ವೀಕಾರ ಮಾಡುವುದಿಲ್ಲವೆಂತಲೂ ನಿನ್ನ ಮಗಳ ಮಗನಿಗೇ ರಾಜ್ಯವೆಂದನು. ಆಗ ದಾಶರಾಜನು ನಿನ್ನ ಮಗನಿಂದ ನನ್ನ ಮೊಮ್ಮಗನಿಗೆ ತೊಂದರೆ ಬರಬಹುದಲ್ಲವೆ? ಎಂದು ಸಂಶಯ ವ್ಯಕ್ತಪಡಿಸಿದಾಗ, ನಾನು ಗೃಹಸ್ಥಾಶ್ರಮ ಸ್ವೀಕರಿಸಿದರಲ್ಲವೆ ನನಗೆ ಪುತ್ರರು, ನಾನು ಅಖಂಡ ಬ್ರಹ್ಮಚರ್ಯೆಯಲ್ಲೇ ಜೀವನ ಪರ್ಯಂತ ಇರುತ್ತೇನೆ. ಮೈಥುನವನ್ನು ತ್ಯಜಿಸಿ ಊರ್ಧ್ವರೇತಸ್ಕನಾಗುತ್ತೇನೆ ಎಂಬ ಭಯಂಕರ ಪ್ರತಿಜ್ಞೆ ಮಾಡಿದನು. (**ಪರಿತ್ಯಜಾ-ಮ್ಯಹಂ ರಾಜ್ಯಂ ಮೈಥುನಂ ಚಾಪಿ ಸರ್ವಶಃ । ಊರ್ಧ್ವರೇತಾ ಭವಿಷ್ಯಾಮಿ ದಾಶ ಸತ್ಯಂ ವದಾಮಿ ತೇ**) ಭಯಂಕರ ಪ್ರತಿಜ್ಞೆ ಮಾಡಿದ್ದರಿಂದಲೇ ಭೀಷ್ಮ (= ಭಯಂಕರ) ರೆಂಬ ಹೆಸರಾಯಿತು. ದೇವತೆಗಳೇ ದೇವವ್ರತನ ಪ್ರತಿಜ್ಞೆಯನ್ನು ಮೆಚ್ಚಿ ಭೀಷ್ಮನೆಂದು ಹೆಸರಿಟ್ಟರು. ಪುಷ್ಪವೃಷ್ಟಿಯನ್ನೂ ಮಾಡಿ ಅತ್ಯದ್ಭುತ ಕಾರ್ಯವೆಂಬ ಸೂಚನೆ ವ್ಯಕ್ತ-ಪಡಿಸಿದರು. (**ತತೋ ಅಂತರಿಕ್ಷೇ ಅಪ್ಸರಸೋ ದೇವಾಃ ಸರ್ಷಿಗಣಾಸ್ತದಾ । ಅಭ್ಯವರ್ಷಂತ ಕುಸುಮೈರ್ಭೀಷ್ಮೋ ಅಯಮಿತಿ ಚಾಬ್ರುವ್**) ಇಂತಹ ಭೀಷ್ಮರ ಪ್ರತಿಜ್ಞೆಯ ಪ್ರಕರಣವನ್ನು ಕೆಲವು ವಿದ್ವಾಂಸರು ತಮ್ಮ ಬುದ್ಧಿಗೆ ತಕ್ಕಂತೆ ವಿಮರ್ಶಿಸುತ್ತಾ, ತನ್ನ ತಂದೆಯ ಕಾಮಪಿಪಾಸೆಯನ್ನು ತೀರಿಸಲು ಭೀಷ್ಮ ಪ್ರತಿಜ್ಞೆ ಮಾಡುವ ಮುಖಾಂತರ ತಾನು ಕ್ಷತ್ರಿಯ, ತನ್ನ ಕರ್ತವ್ಯವೇನು ಎಂಬುದನ್ನು ಮರೆತು ವಂಶ ಅರಾಜಕತೆ ಕಡೆಗೆ ಸಾಗುವಂತೆ ಮಾಡಿದ. ಇವನು ಪ್ರತಿಜ್ಞೆ ಮಾಡಿದ್ದರಿಂದಲೇ ಮುಂದೆ ದುರ್ಯೋಧ-ನಾದಿಗಳಂತಹ ದುಷ್ಟರು ಹುಟ್ಟಲು ಕಾರಣವಾಯಿತು. ಆದ್ದರಿಂದ ಭೀಷ್ಮರು ಕರ್ತವ್ಯ ಭ್ರಷ್ಟರು. ತಂದೆಯ ಕಾಮಪಿಪಾಸೆಗೆ ಬೆಲೆ ಕೊಡಬೇಕಾಗಿರಲಿಲ್ಲ. ತಪ್ಪು ಮಾಡಿದರು ಎಂದು ವಿಮರ್ಶಿಸಿದ್ದಾರೆ. ಆದರೆ ತಂದೆಯ ಮಾತನ್ನು ಪರಿಪಾಲನೆ ಮಾಡಬೇಕಾದದ್ದು ಮಗನ ಕರ್ತವ್ಯವೆಂಬುದನ್ನೇ ಮರೆತಿದ್ದಾರೆ. ಶ್ರೀರಾಮಚಂದ್ರ ತಂದೆಯ ಮಾತಿನಂತೆ ಕಾಡಿಗೆ ನಡೆದ. ಕೇವಲ ಹೆಂಗಸಿನ ಮಾತಿಗೆ ಕಟ್ಟುಬಿದ್ದ ದಶರಥನ ಮಾತಿಗೆ ಬೆಲೆ ಏನು? ಕ್ಷತ್ರಿಯನಿಗೆ ರಾಜ್ಯರಕ್ಷಣವೇ ಕರ್ತವ್ಯ. ಆದ್ದರಿಂದ ತಂದೆಯ ಮಾತು

ಪಾಲಿಸಲ್ಲ ಎಂದು ಹೇಳಿದನೆ? ವಸಿಷ್ಠ, ಜಾಬಾಲಾದಿಗಳು ಧರ್ಮಶಾಸ್ತ್ರದಂತೆ ಸಮಾಧಾನ ಮಾಡಿದರೂ ಪಿತೃವಾಕ್ಯ ಪರಿಪಾಲನೆಯೇ ಮುಖ್ಯವೆಂದು ಪಿತೃವಾಕ್ಯ ಪರಿಪಾಲನೆಗಾಗಿ ಪರಶುರಾಮ ತಾಯಿಯನ್ನೇ ಕೊಂದ. ಇಂತಹ ಆದರ್ಶಗಳು ಕಣ್ಣೆದುರಿಗೆ ಇರುವಾಗ ಭೀಷ್ಮರು ಪಿತೃವಾಕ್ಯ ಪರಿಪಾಲನೆಯನ್ನು ಬಿಡುತ್ತಾರೆಯೇ? ಎಂದೂ ಇಲ್ಲ. ಧರ್ಮಸಮ್ಮತವಾಗಿಯೇ ಪ್ರತಿಜ್ಞೆ ಮಾಡಿ ಮಗನ ಆದರ್ಶ ಮೆರೆದಿದ್ದಾರೆ. ಪ್ರತಿಜ್ಞೆ ಧರ್ಮಸಮ್ಮತವಾದುದರಿಂದಲೇ ದೇವತೆಗಳೂ ಸಂತೋಷ-ದಿಂದ ಪುಷ್ಪವೃಷ್ಟಿಮಾಡಿದರು. ದೇವತೆಗಳಿಗೆ ಧರ್ಮಾಧರ್ಮ ಜ್ಞಾನ ಇಲ್ಲವೆ? ಕಲಿಯುಗದ ಪಂಡಿತರಿಂದ ನೋಡಿ ಕಲಿಯಬೇಕೆ?

(ಮುಂದುವರೆಯುವುದು)

### ಸ್ತ್ರೀ-ಪುರುಷರ ನಮಸ್ಕಾರ ವಿಧಾನಗಳು

ಕಾಯಕ (ಸಾಷ್ಟಾಂಗ) ನಮಸ್ಕಾರವನ್ನು ಪುರುಷರು ಮಾತ್ರ ಏಕೆ ಮಾಡಬೇಕು, ಸ್ತ್ರೀಯರು ಏಕೆ ಮಾಡಬಾರದು ಎಂದರೆ, ಅದಕ್ಕೆ ಉತ್ತರವನ್ನು ಈ ರೀತಿ ಇದೆ -

''ಬ್ರಾಹ್ಮಣಸ್ಯ ಗುದಂ ಶಂಖಂ ಯೋಷಿತಃ ಸ್ತನಮಂಡಲಮ್ ।
ರೇತಃ ಪವಿತ್ರಗ್ರಂಥಿಂ ಚ ನ ಭೂಃ ಧಾರಯಿತುಂ ಕ್ಷಮಾ ॥''

ಏನೆಂದರೆ ಇಡೀ ಭೂಮಂಡಲದ ಭಾರವನ್ನು ಹೊತ್ತಿರುವ ಭೂದೇವಿಯು ಬ್ರಾಹ್ಮಣರ ಗುದಪ್ರದೇಶವನ್ನು, ಶಂಖವನ್ನು, ಸ್ತ್ರೀಯರ ಸ್ತನಮಂಡಲವನ್ನು, ಶುಕ್ಲರೂಪದಲ್ಲಿರುವ ರೇತಸ್ಸನ್ನು, ದರ್ಭೆಯ ಗ್ರಂಥಿಯನ್ನು ಧರಿಸಲಾರಳಂತೆ. ಆದುದರಿಂದ **ಸ್ತ್ರೀಯರು ಸಾಷ್ಟಾಂಗ ನಮಸ್ಕಾರವನ್ನು ಮಾಡಬಾರದೆಂದು** ತಿಳಿಸುತ್ತಾ ಇದನ್ನು ಕೇವಲ ಪುರುಷರಿಗೆ ಮಾತ್ರ ವಿಧಾನ ಮಾಡಿರುವರು. ಅಲ್ಲದೇ! ಪುರುಷರು ಆಸನವಿಲ್ಲದೇ ನೆಲದ ಮೇಲೆ ಕುಳಿತುಕೊಳ್ಳಬಾರದೆಂದೂ ಕೂಡ ವಿಧಾನ ಮಾಡಿರುವರು. **ಇದರಂತೆಯೇ ಸ್ತ್ರೀಯರು ಉರುಳುಸೇವೆಯನ್ನೂ ಮಾಡಬಾರದು.**

ಚಂದಾದಾರರಾಗಬಯಸುವವರು ಮಂತ್ರಾಲಯ ಹಾಗೂ
ಬೆಂಗಳೂರು ಕಾರ್ಯಾಲಯಗಳಿಗೆ ಹಣ ಕಳುಹಿಸಿ ಚಂದಾದಾರರಾಗಬಹುದು.
ಪತ್ರಿಕೆ ವಿತರಣೆಯ ಬಗ್ಗೆ ಯಾವುದೇ ದೂರುಗಳಿದ್ದರೂ
ಮಂತ್ರಾಲಯದ ವಿಳಾಸವನ್ನು ಸಂಪರ್ಕಿಸಿ.
ವಿಳಾಸಗಳು ಮುಖಪುಟದಲ್ಲಿವೆ.

ಮೃಗಗಳು ಮೃಗಗಳೊಡನೆ, ಹಸುಗಳು ಹಸುಗಳೊಡನೆ, ಕುದುರೆಗಳು ಕುದುರೆ-ಗಳೊಡನೆ, ಮೂರ್ಖರು ಮೂರ್ಖರೊಡನೆ, ವಿದ್ವಾಂಸರು ವಿದ್ವಾಂಸರೊಡನೆ ಸೇರುತ್ತಾರೆ. ಗುಣಶೀಲಾಭ್ಯಾಸಗಳು ಸಮಾನವಾಗಿದ್ದವರೊಡನೆ ಸ್ನೇಹ ಬೆಳೆಯುತ್ತದೆ.

- ಸುಭಾಷಿತಮಂಜರೀ





# ಪುತ್ರಸಂತಾನಪ್ರದ ಸೋಮೋತ್ಪತ್ತಿ

■ ಡಾ. ಎನ್. ವಾದಿರಾಜಾಚಾರ್ಯ
ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

**"ಪುನ್ನಾಮ್ನೋ ನರಕಾತ್ ತ್ರಾಯತ ಇತಿ ಪುತ್ರಃ"** ಎಂಬ ಪ್ರಮಾಣಾನುಸಾರ ಪುತ್ ಎಂಬ ನರಕದಿಂದ ಪಾರುಮಾಡುವವನೇ ಪುತ್ರನೆಂದು ಕರೆಯಲ್ಪಡುತ್ತಾನೆ. ಆದ್ದರಿಂದಲೇ ಎಲ್ಲರೂ ಪುತ್ರಸಂತಾನಾಪೇಕ್ಷಿಗಳಾಗಿ ನಾನಾ ತರಹದ ಪ್ರಯತ್ನ-ಗಳಿಂದ ಪುತ್ರರನ್ನು ಪಡೆಯುತ್ತಾರೆ. ಅದಕ್ಕಾಗಿ ಪುರಾಣಗಳಲ್ಲಿಯೂ ರಾಜಾದಿರಾಜರು-ಗಳು ಕೂಡಾ ಪುತ್ರರ ಉದ್ದೇಶದಿಂದ ಯಜ್ಞ-ಯಾಗಾದಿಗಳನ್ನಾಚರಿಸಿದ್ದು ನಾವು ಕಾಣಬಹುದು. ಈ ನಿಟ್ಟಿನಲ್ಲಿ ಹರಿವಂಶ ಪಾರಾಯಣ, ಭಾಗವತ ಶ್ರವಣ, ತ್ರಿಸ್ಥಲೀ ಶ್ರಾದ್ಧಾಚರಣೆ, ಮಂತ್ರಾಲಯ, ಸೋದೆ ಮುಂತಾದ ಕ್ಷೇತ್ರಗಳಲ್ಲಿ ಸೇವಾಚರಣೆ ಹೀಗೆ ಮಾಡುವ ಅನೇಕ ತರಹದ ಪ್ರಯತ್ನಗಳಲ್ಲಿ ಈ ''ಸೋಮೋತ್ಪತ್ತಿ'' ಶ್ರವಣವು ಒಂದಾಗಿದೆ.

ಇದು ಯಜುರ್ವೇದಮಂತ್ರ ಭಾಗದಲ್ಲಿ ಬರುವಂತಹದ್ದು. ಚಂದ್ರನಲ್ಲಿ ೧೬ ಕಲೆಗಳು ಒಂದೊಂದಾಗಿ ಬಂದು ಸೇರುವುದು ಮತ್ತು ನಾಶವಾಗುವುದನ್ನು ಇದರಲ್ಲಿ ವರ್ಣಿಸಿದ್ದಾರೆ. ಇದರ ಶ್ರವಣ - ಪಾರಾಯಣಗಳಿಂದ ಅನೇಕ ಫಲಗಳನ್ನು ಹೇಳಿದ್ದರೂ,

**ಸೋಮೋತ್ಪತ್ತಿಮಿಮಾಂ ಯಸ್ತು ಗುರ್ವಿಣೀಂ ಶ್ರಾವಯೇತ್ಸ್ತ್ರಿಯಾಮ್ ।**
**ಋಷಭಂ ಜನಯೇತ್ಪುತ್ರಂ ಸರ್ವಜ್ಞಂ ವೇದಪಾರಗಮ್ ॥**

ಎಂಬ ಮಂತ್ರದ ಮೂಲಕ ಈ ಸೋಮೋತ್ಪತ್ತಿಯನ್ನು ಯಾರು ಗರ್ಭಿಣಿಯಾದ ತನ್ನ ಹೆಂಡತಿಗೆ ಶ್ರವಣಮಾಡಿಸುತ್ತಾರೋ ಅವರು ಉತ್ತಮವಾದ ಮಗನನ್ನು ಪಡೆಯು-ತ್ತಾನೆಂದು ಹೇಳಿದ್ದಾರೆ.

**ಶ್ರವಣಕ್ರಮ**

ಸ್ತ್ರೀಯಳು ಗರ್ಭಿಣಿಯಾದ ವಿಚಾರ ತಿಳಿದ ದಿನದಿಂದ ಪ್ರಸವವಾಗುವವರೆಗೆ ಒಂದು ದಿನವೂ ಬಿಡದಲೆ ಸಂಕಲ್ಪ ಪುರಸ್ಸರ ದೇವರ ಮುಂದೆ ತುಪ್ಪದ ದೀಪವನ್ನು ಹಚ್ಚಿಟ್ಟು ಪತಿ ಅಥವಾ ಬೇರೆಯಾದರೂ ಪುರುಷರಿಂದಲೇ ಶ್ರವಣಮಾಡಬೇಕು. ಪ್ರಾತಃ ಸ್ನಾನವಾದ ನಂತರ ಶ್ರವಣಮಾಡುವುದು ಯೋಗ್ಯ. ಒಂದು ವೇಳೆ ಆ ಸಮಯ

ಒದಗಿದಿದ್ದರೆ ದಿನದ ಯಾವ ಸಮಯದಲ್ಲಾದರೂ ತಪ್ಪದೇ ಶ್ರವಣಮಾಡಬೇಕು. ಇದರಿಂದ ಮಕ್ಕಳೇ ಇಲ್ಲದವರಿಗೂ ಮತ್ತು ಹೆಣ್ಣು ಸಂತಾನವಾಗಿ ಗಂಡುಸಂತಾನ-ವಾಗದೆ ಇರುವವರಿಗೂ ಗಂಡುಸಂತಾನವಾದದ್ದು ಕಂಡುಬಂದಿದೆ.

## 'ಸೋಮೋತ್ಪತ್ತಿ ಮೂಲಭಾಗ'

(ಅನುವಾದ ಸಹಿತ)

ಋಷಿಗಳ ಉವಾಚ -

**ಕೌತೂಹಲಂ ಸಮುತ್ಪನ್ನಂ ದೇವತಾ ಋಷಿಭಿಃ ಸಹ ।**
**ಸಂಶಯಂ ಪರಿಪೃಚ್ಛಂತಿ ವ್ಯಾಸಂ ಧರ್ಮಾರ್ಥ ಕೋವಿದಮ್ ॥**

**ಕಥಂ ವಾ ಕ್ಷೀಯತೇ ಸೋಮಃ ಕ್ಷೀಣೋ ವಾ ವರ್ಧತೇ ಕಥಮ್ ।**
**ಇಮಂ ಪ್ರಶ್ನಂ ಮಹಾಭಾಗ ಬ್ರೂಹಿ ಸರ್ವಮಶೇಷತಃ ॥**

ದೇವತೆಗಳು ಋಷಿಗಳಿಂದ ಕೂಡಿ ವ್ಯಾಸರನ್ನು ಕುರಿತು ಸಂಶಯದಿಂದ ಪ್ರಶ್ನಿಸುತ್ತಾರೆ. ಹೇ ಮಹಾಸ್ವಾಮಿ ಚಂದ್ರನ ಕ್ಷಯ ಮತ್ತು ವೃದ್ಧಿಯ ಬಗ್ಗೆ ನಮಗೆ ವಿವರಣೆಯನ್ನು ಕೊಡಿರಿ.

ಆಗ ವ್ಯಾಸರು ಹೇಳುತ್ತಾರೆ -

**ಶೃಣ್ವಂತು ದೇವತಾಃ ಸರ್ವೇ ಯದರ್ಥಮಿಹ ಆಗತಃ ।**
**ತಮರ್ಥಂ ಸಂಪ್ರವಕ್ಷ್ಯಾಮಿ ಸೋಮಸ್ಯ ಗತಿಮುತ್ತಮಾಮ್ ॥**

**ಅಗ್ನೌ ಹುತಂ ಚ ದತ್ತಂ ಚ ಸರ್ವಂ ಸೋಮಗತಂ ಭವೇತ್ ।**
**ತತ್ರ ಸೋಮಃ ಸಮುತ್ಪನ್ನಃ ಸ್ಮಿತಾಂಶು-ರ್ಹಿಮ-ವರ್ಷಣಃ ॥**

**ಅಷ್ಟಾಶೀತಿ ಸಹಸ್ರಾಣಿ ವಿಸ್ತೀರ್ಣೋ ಯೋಜನಾನಿ ತು ।**
**ಪ್ರಮಾಣಂ ತತ್ರ ವಿಜ್ಞೇಯಂ ಕಲಾಃ ಪಂಚದಶೈವ ತತ್ ॥**

**ಷೋಡಶೀ ತು ಕಲಾಪ್ಯತ್ರ ಇತ್ಯೇಕೋಽಪಿ ವಿಧಿರ್ಭವೇತ್ ।**
**ತಂ ಚ ಸೋಮಂ ಪಪುರ್ದೇವಾಃ ಪರ್ಯಾಯೇಣ ಆನುಪೂರ್ವಶಃ ॥**

ದೇವತೆಗಳೇ! ನೀವು ಯಾವ ವಿಚಾರವನ್ನೂ ತಿಳಿಯಲು ಇಲ್ಲಿಗೆ ಬಂದಿದ್ದರೋ ಅದರ ವಿವರಣೆಯನ್ನು ನಿಮಗಾಗಿ ಈಗ ಹೇಳುತ್ತೇನೆ. ಅಗ್ನಿಯಲ್ಲಿ ಸೋಮನ ಉದ್ದಿಶಃ ಹವನ ಮಾಡಿದ್ದು, ಸೋಮನ ಪ್ರೀತಿಗಾಗಿ ದಾನ ಕೊಟ್ಟದ್ದು, ಅವನಲ್ಲಿ ಸೇರಿ ಅಲ್ಲಿ ಚಂದ್ರನ ಉತ್ಪತ್ತಿಯಾಗುತ್ತದೆ. ೧೮,೦೦೦ ಯೋಜನ ವಿಸ್ತಾರವಾದ ಈ ಚಂದ್ರಮಂಡಲ ಕೇವಲ ೧೫ ಕಲೆಗಳಿಂದ ಕೂಡಿರುತ್ತದೆ. ೧೬ ಕಲೆಗಳು ಎಂದು



ಕೆಲವರು ಹೇಳುವುದುಂಟು. ಈ ಕಲೆಗಳನ್ನು ಕೃಷ್ಣಪಕ್ಷದಲ್ಲಿ ದೇವತೆಗಳು ಪಾನ-ಮಾಡುತ್ತಾ ಬರುತ್ತಾರೆ.

**ಪ್ರಥಮಾಂ ಪಿಬತೇ ವಹ್ನಿಃ ದ್ವಿತೀಯಾಂ ಪಿಬತೇ ರವಿಃ ।**
**ವಿಶ್ವೇದೇವಾಃ ತೃತೀಯಾಂ ತು ಚತುರ್ಥೀಂ ಸಲಿಲಾಧಿಪಃ ॥**

**ಪಂಚಮೀಂ ತು ವಷಟ್ಕಾರಃ ಷಷ್ಠೀಂ ಪಿಬತ ವಾಸವಃ ।**
**ಸಪ್ತಮೀಂ ಋಷಯೋ ದಿವ್ಯಾಃ ಅಷ್ಟಮೀಮ್ ಅಜ ಏಕಪಾತ್ ॥**

**ನವಮೀಂ ಕೃಷ್ಣಪಕ್ಷಸ್ಯ ಯಮಃ ಪ್ರಾಶ್ನಾತಿ ವೈ ಕಲಾಮ್ ।**
**ದಶಮೀಂ ಪಿಬತೇ ವಾಯುಃ ಪಿಬತ್ಯೇಕಾದಶೀ ಉಮಾ ॥**

**ದ್ವಾದಶೀಂ ಪಿತರಃ ಸರ್ವೇ ಸಂಪ್ರಾಶ್ನಂತಿ ಭಾಗಶಃ ।**
**ತ್ರಯೋದಶೀಂ ಧನಾಧ್ಯಕ್ಷಃ ಕುಬೇರಃ ಪಿಬತೇ ಕಲಾಮ್ ॥**

| | | |
|---|---|---|
| ಮೊದಲನೆಯ | ಕಲೆಯನ್ನು | ಅಗ್ನಿಯು - |
| ಎರಡನೆಯ | ,, ,, | ಸೂರ್ಯನು |
| ಮೂರನೆಯ | ,, ,, | ವಿಶ್ವೇದೇವತೆಗಳು |
| ನಾಲ್ಕನೆಯ | ,, ,, | ವರುಣನೂ |
| ಐದನೆಯ | ,, ,, | ವಷಟ್‌ಕಾರದೇವತೆ |
| ಆರನೆಯ | ,, ,, | ಇಂದ್ರನು |
| ಏಳನೆಯ | ,, ,, | ಋಷಿಗಳು |
| ಎಂಟನೆಯ | ,, ,, | ಅಜನು |
| ಒಂಭತ್ತನೆಯ | ,, ,, | ಯಮನು |
| ಹತ್ತನೆಯ | ,, ,, | ವಾಯುವು |
| ಹನ್ನೊಂದನೆಯ | ,, ,, | ಪಾರ್ವತಿಯು |
| ಹನ್ನೆರಡನೆಯ | ,, ,, | ಪಿತೃಗಳು |
| ಹದಿಮೂರನೆಯ | ,, ,, | ಕುಬೇರನು |

**ಚತುರ್ದಶೀಂ ಪಶುಪತಿಃ ಪಂಚದಶೀಂ ಪ್ರಜಾಪತಿಃ ।**
**ನಿಷ್ಪಾತ ಏಕ-ಕಲಾಶೇಷಃ ಚಂದ್ರಮಾ ನ ಪ್ರಕಾಶತೇ ॥**

**ಕಲಾ ಷೋಡಶಕಾಯಾಂ ತು ಆಪಃ ಪ್ರವಿಶತೇ ಸದಾ ।**
**ಅಮಾಯಾಂ ತು ಸದಾ ಸೋಮಃ ಔಷಧಿಃ ಪ್ರತಿಪದ್ಯತೇ ॥**

ತಮ್ ಓಷಧಿಗತಂ ಗಾವಃ ಪಿಬತ್ಯಂಬುಗಂತಂ ಚ ಯತ್ ।
ಯತ್ಕ್ಷೀರಮ್ ಅಮೃತಂ ಭೂತ್ವಾ ಮಂತ್ರಪೂತಂ ದ್ವಿಜಾತಿಭಿಃ ॥

ಹುತಮಗ್ನಿಷು ಯಜ್ಞೇಷು ಪುನರಾಪ್ಯಾಯತೇ ಶಶೀ ।
ದಿನೇ ದಿನೇ ಕಲಾ ವೃದ್ಧಿಃ ಪೌರ್ಣಿಮಾಸ್ಯಾಂ ತು ಪೂರ್ಣಶಃ ॥

ಹದಿನಾಲ್ಕನೇ ಕಲೆಯನ್ನು ರುದ್ರನು, ಹದಿನೈದನೇ ಕಲೆಯನ್ನು ಪ್ರಜಾಪತಿಯು ಪಾನಮಾಡಿದ ಮೇಲೆ ಒಂದೇ ಒಂದು ಕಲೆಯು ಉಳಿಯುತ್ತದೆ. ಆಗ ಚಂದ್ರನು ಪೂರ್ಣ ಕಾಣಿಸುವುದೇ ಇಲ್ಲ. ಆ ಉಳಿದ ಕಲೆಯು ನೀರಿನಲ್ಲಿ ಪ್ರವೇಶಮಾಡುತ್ತದೆ. ಅಮಾವಾಸ್ಯೆಯ ದಿನದಲ್ಲಿ ಚಂದ್ರನು ಔಷಧಿಗಳಲ್ಲಿ ಇರುತ್ತಾನೆ. ಉಳಿದ ನೀರಿನಲ್ಲಿದ್ದ ಒಂದು ಕಲೆಯನ್ನು ಗೋವುಗಳು ಕುಡಿಯುತ್ತವೆ. ಅದು ಹಾಲಿನ ರೂಪದಲ್ಲಿ ಗೋವು-ಗಳಿಂದ ಉತ್ಪತ್ತಿಯಾಗುತ್ತದೆ. ಅದನ್ನೇ ಬ್ರಾಹ್ಮಣರು ಮಂತ್ರದಿಂದ ಪವಿತ್ರವನ್ನಾಗಿ ಮಾಡಿ ಅಗ್ನಿಯಲ್ಲಿ ಹವನ ಮಾಡುತ್ತಾರೆ. ಆಗ ಮತ್ತೆ ಚಂದ್ರನು ಉದಯಿಸುತ್ತಾನೆ. ಕಲೆಗಳೆಲ್ಲ ಪೂರ್ಣ ಬೆಳೆದ ಚಂದ್ರನು ಹುಣ್ಣಿಮೆಯ ದಿನ ಪೂರ್ಣ ಕಾಣಿಸುತ್ತಾನೆ.

ನವೋ ನವೋ ಭವತಿ ಜಾಯ ಮಾನೋಽಹ್ನಾಂ
ಕೇತು ರುಷಸಾ-ಮೇತ್ಯಗ್ರಂ ।
ಭಾಗಂ ದೇವೇಭ್ಯೋ ವಿದಧಾ-ತ್ಯಾಯನ್
ಪ್ರಚಂದ್ರಮಾ-ಸ್ತಿರತೇ ದೀರ್ಘಮಾಯು ॥

ದಿನದಿನಕ್ಕೂ ಅಭಿವೃದ್ಧನಾದ ಚಂದ್ರನು ದೇವತೆಗಳಿಗೆ ಬೇಕಾದ ಭಾಗವನ್ನು ಕೊಡುತ್ತಾನೆ. ಅಂತಹ ಚಂದ್ರನು ಎಲ್ಲರಿಗೂ ದೀರ್ಘವಾದ ಆಯುಷ್ಯವನ್ನು ಉಂಟು ಮಾಡುತ್ತಾನೆ.

ತ್ರಿಮುಹೂರ್ತಂ ವಸೇತ್ ಅರ್ಕೇ ತ್ರಿಮುಹೂರ್ತಂ ಜಲೇ ವಸೇತ್ ।
ತ್ರಿಮುಹೂರ್ತಂ ವಸೇದ್ ಗೋಷು ತ್ರಿಮುಹೂರ್ತಂ ವನಸ್ಪತೌ ॥

ವನಸ್ಪತಿಗತೇ ಸೋಮೇ ಯಸ್ತು ಹಿಂಸ್ಯಾದ್ ವನಸ್ಪತಿಮ್ ।
ಘೋರಾಯಾಂ ಭ್ರೂಣಹತ್ಯಾಯಾಂ ಯುಜ್ಯತೇ ನಾತ್ರ ಸಂಶಯಃ ॥

ವನಸ್ಪತಿ-ಗತೇ ಸೋಮೇ ಅನಡುಹೋ ಯಸ್ತು ವಾಹಯೇತ್ ।
ನಾಶ್ನಂತಿ ಪಿತರಃ ತಸ್ಯ ದಶವರ್ಷಾಣಿ ಪಂಚ ಚ ॥

ದೇವತೆಗಳು ಚಂದ್ರನ ಕಲೆಯನ್ನು ಪಾನಮಾಡಿದ ಮೇಲೆ ಚಂದ್ರನು ಮೂರು ಮುಹೂರ್ತ ಸೂರ್ಯನಲ್ಲಿ, ಮೂರು ಮುಹೂರ್ತ ನೀರಿನಲ್ಲಿ, ಮೂರು ಮುಹೂರ್ತ ಗೋವುಗಳಲ್ಲಿ, ಮೂರು ಮುಹೂರ್ತ ವನಸ್ಪತಿಯಲ್ಲಿ ಇರುತ್ತಾನೆ.



ಚಂದ್ರನು ವನಸ್ಪತಿಯಲ್ಲಿದ್ದಾಗ ಯಾರು ಗಿಡ-ಮರಗಳನ್ನು ಕಡಿಯುತ್ತಾರೋ ಅವರು ಭ್ರೂಣಹತ್ಯೆಯೆಂಬ ಮಹಾಪಾಪಕ್ಕೆ ಗುರಿಯಾಗುತ್ತಾರೆ. ಚಂದ್ರನು ವನಸ್ಪತಿ-ಯಲ್ಲಿದ್ದಾಗ ಯಾರು ಗೋವನ್ನು ಹೊರುತ್ತಾರೋ (ಬಲಿಯನ್ನು ಕೊಡಲು) ಅವರ ಪಿತೃಗಳು ೧೫ ವರ್ಷಗಳ ಕಾಲ ಶ್ರಾದ್ಧಾನ್ನವನ್ನು ಸ್ವೀಕರಿಸುವುದಿಲ್ಲ.

ವನಸ್ಪತಿ ಗತೇ ಸೋಮೇ ಪಂಥಾನಂ ಯಸ್ತು ಕಾರಯೇತ್ ।
ಗಾವಃ ತಸ್ಯ ಪ್ರಣಶ್ಯಂತಿ ಚಿರಕಾಲಮುಪಸ್ಥಿತಾಃ ॥

ವನಸ್ಪತಿಗತೇ ಸೋಮೇ ಸ್ತ್ರಿಯಂ ವಾ ಯೋಽಧಿಗಚ್ಛತಿ ।
ಸ್ವರ್ಗಸ್ಥಾಃ ಪಿತರಸ್ತಸ್ಯ ಚ್ಯವಂತೇ ನಾತ್ರ ಸಂಶಯಃ ॥

ವನಸ್ಪತಿಗತೇ ಸೋಮೇ ಪರಾನ್ನಂ ಯಸ್ತು ಭುಂಜತಿ ।
ತಸ್ಯ ಮಾಸಕೃತೋ ಹೋಮಃ ದಾತಾರಮಧಿಗಚ್ಛತಿ ॥

ವನಸ್ಪತಿಗತೇ ಸೋಮೇ ಯಃ ಕುರ್ಯಾತ್ ದಂತಧಾವನಮ್ ।
ಚಂದ್ರಮಾ ಭಕ್ಷಿತೋ ಯೇನ ಪಿತೃವಂಶಸ್ಯ ಘಾತಕಃ ॥

ಚಂದ್ರನು ವನಸ್ಪತಿಯಲ್ಲಿದ್ದಾಗ ಯಾರು ಮಾರ್ಗವನ್ನಡ್ಡಗಟ್ಟಿ ಸುಲಿಗೆಯನ್ನ ಮಾಡುತ್ತಾರೋ ಅವರ ಮನೆಯಲ್ಲಿ ಬಹುಕಾಲದಿಂದಿದ್ದ ಗೋವುಗಳು ಮರಣ ಹೊಂದುತ್ತವೆ. ಆ ಸಮಯದಲ್ಲಿ ಪುರುಷನು ಸ್ತ್ರೀಸಂಗವನ್ನು ಮಾಡಿದರೆ ಸ್ವರ್ಗ-ದಲ್ಲಿದ್ದ ಅವನ ಪಿತೃಗಳು ನರಕಕ್ಕೆ ಬೀಳುತ್ತಾರೆ. ಚಂದ್ರನು ವನಸ್ಪತಿಯಲ್ಲಿರುವಾಗ ಯಾರು ಪರಾನ್ನವನ್ನು ಸ್ವೀಕರಿಸುತ್ತಾರೋ ಅವರ ಒಂದು ತಿಂಗಳು ಮಾಡಿದ ಹೋಮದ ಫಲವು ಪರಾನ್ನವನ್ನು ಕೊಟ್ಟವನಿಗೆ ಲಭಿಸುತ್ತದೆ. ಅದರಂತೆ ಆ ಸಮಯದಲ್ಲಿ ಯಾರು ದಂತಧಾವನೆ ಮಾಡುತ್ತಾರೋ ಅವರು ಚಂದ್ರನನ್ನು ಭಕ್ಷಿಸಿ-ದಂತೆ ಆಗುತ್ತದೆ. ಜೊತೆಗೆ ಪಿತೃವಂಶವನ್ನು ನಾಶಮಾಡಿದ ಪಾಪಕ್ಕೆ ಗುರಿಯಾಗುತ್ತಾರೆ.

ಸೋಮೋತ್ಪತ್ತಿಮಿಮಾಂ ಯಸ್ತು ಶ್ರಾದ್ಧಕಾಲೇ ಸದಾ ಪಠೇತ್ ।
ತದನ್ನಂ ಅಮೃತಂ ಭೂತ್ವಾ ಪಿತೄಣಾಂ ದತ್ತಮಕ್ಷಯಮ್ ॥

ಸೋಮೋತ್ಪತ್ತಿಮಿಮಾಂ ಯಸ್ತು ಗುರ್ವಿಣೀಂ ಶ್ರಾವಯೇತ್ ಪ್ರಿಯಾಮ್ ।
ಋಷಭಂ ಜನಯೇತ್ಪುತ್ರಂ ಸರ್ವಜ್ಞಂ ವೇದಪಾರಗಮ್ ॥

ಸೋಮೋತ್ಪತ್ತಿಮಿಮಾಂ ಯಸ್ತು ಪರ್ವಕಾಲೇ ಸದಾ ಪಠೇತ್ ।
ಸರ್ವಾನ್ ಕಾಮಾನ್ ಅವಾಪ್ನೋತಿ ಸೋಮಲೋಕಂ ಸ ಗಚ್ಛತಿ ॥

ಶ್ರೀಸೋಮಲೋಕಂ ಸ ಗಚ್ಛತ್ಯೋಂ ನಮ ಇತಿ ॥

ಯಾರು ಸೋಮೋತ್ಪತ್ತಿಯನ್ನು ಶ್ರಾದ್ಧಕಾಲದಲ್ಲಿ ಪಠಿಸುತ್ತಾರೋ ಅವರು ಕೊಟ್ಟ ಅನ್ನವು ಅಮೃತವೂ, ಅಕ್ಷಯವೂ ಆಗುತ್ತದೆ. ಸೋಮೋತ್ಪತ್ತಿಯನ್ನು ಗರ್ಭಿಣಿಯಾದ ಪತ್ನಿಗೆ ಶ್ರವಣಮಾಡಿಸಿದ ಪುರುಷನು ಜ್ಞಾನಿಯಾದ ವೇದವೇದಾಂತವನ್ನು ಬಲ್ಲ ಮಗನನ್ನೂ ಪಡೆಯುತ್ತಾನೆ. ಸೋಮೋತ್ಪತ್ತಿಯನ್ನು ಪರ್ವಕಾಲದಲ್ಲಿ ಪಠಿಸುವುದರಿಂದ ಸರ್ವಕಾಮನೆಗಳು ಪೂರ್ಣವಾಗುವುದಲ್ಲದೆ ಚಂದ್ರಲೋಕವನ್ನು ಹೊಂದುತ್ತಾನೆ.

**ಶುಕ್ಲೇ ದೇವಾನ್, ಪಿತೄನ್ ಕೃಷ್ಣೇ ತರ್ಪಯತ್ಯಮೃತೇನ ಚ ।**
**ಯಶ್ಚ ರಾಜಾ ದ್ವಿಜಾತೀನಾಂ ತಸ್ಮೈ ಸೋಮಾತ್ಮನೇ ನಮಃ ॥**

ಶುಕ್ಲಪಕ್ಷದಲ್ಲಿ ದೇವತೆಗಳನ್ನು ಕೃಷ್ಣಪಕ್ಷದಲ್ಲಿ ಪಿತೃಗಳನ್ನು ತೃಪ್ತಿಪಡಿಸುವ, ನಕ್ಷತ್ರಗಳಿಗೆ ರಾಜನಾದ ಚಂದ್ರನಿಗೆ ನನ್ನ ನಮಸ್ಕಾರಗಳು.

❑❑

## SMS ಸ್ಪಂದನ ಸ್ಪಂದನ ಸ್ಪಂದನ



ನಿಮ್ಮ ಅಭಿಪ್ರಾಯಗಳನ್ನು **SMS** ಮೂಲಕ ನಮಗೆ ತಿಳಿಸಬಹುದೆಂದು ನಾವು ಕರೆಯಿತ್ತಾಗ ಅದಕ್ಕೆ ಸ್ಪಂದಿಸಿದ ಸದಸ್ಯರುಗಳ **SMS** ಗಳನ್ನು ಇಲ್ಲಿ ಅನಾವರಣಗೊಳಿಸುತ್ತಿದ್ದೇವೆ. ನಿಮ್ಮಿಂದ ಇನ್ನೂ ಹೆಚ್ಚಿನ ಸ್ಪಂದನವನ್ನು ಪತ್ರಿಕೆಯು ನಿರೀಕ್ಷಿಸುತ್ತದೆ.

1. **You are doing a nice job. It is like God's Service.**
   Mobile No. : 9480005108
   Dt. 20-02-2007 — Time : 2 : 29 p.m.
2. **Shree Gurusarvabhouma Pathrike Odudarinda nammamanassu shaanta vaagutthade....**
   L.M. No. 255 — Mobile No. : 9880306178
   Dt. 07-03-2007 — Time : 02 : 00 p.m.
3. **The monthly magazine released by you on every month is very wonderful and it give the knowledge of our culture followed by our older generation, removing the bad conception about the vedas and other subject and finally I want to say it is very good process of spreading the knowledge.**
   Mobile No. : 9844064082
   Dt. 12-03-2007 — Time : 08 : 04 a.m.

(ಇನ್ನಷ್ಟು SMS ಗಳು ಮುಂದಿನ ಸಂಚಿಕೆಯಲ್ಲಿ)



ಲೇಖನಾಂಕ

# ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ

■ ಪಂ. ಆನಂದತೀರ್ಥಾಚಾರ್ಯ
ಆತ್ಮಕೂರು, ಆಂಧ್ರಪ್ರದೇಶ

**ನಮಃ ಶ್ರೀರಾಘವೇಂದ್ರಾಯ ವಿಶ್ವವಿಘ್ನವಿನಾಶಿನೇ ।**
**ಸರ್ವಮಂತ್ರೇಷ್ವಯಂ ಮಂತ್ರೋ ನಿತ್ಯಂ ಚಿಂತಾಮಣೀಯತೇ ॥**

ಶ್ರೀಮದಾನಂದತೀರ್ಥಭಗವತ್ಪಾದರು 'ಕರ್ಮನಿರ್ಣಯ' ಗ್ರಂಥದಲ್ಲಿ ''ಅತೀದು ಶಕ್ರಓಹತ'' ಎನ್ನುವ ಶ್ರುತಿಯಲ್ಲಿಯ ''ಭಿನತ್ ಕನೀನ ಓದನಂ ಪಚ್ಯಮಾನಂ ಪರೋಗಿರಾ'' ಎಂಬ ಶ್ರುತಿಭಾಗಕ್ಕೆ ''ಅಭಿನದ್ ಭಗವಾನ್ ಕಾನಿನೋ ಬಾದರಾಯಣಃ'' ಎಂಬುದಾಗಿ ವ್ಯಾಖ್ಯಾನಗೈದಿರುವರು. (ಕರ್ಮನಿರ್ಣಯಃ - ದಶಪ್ರಕರಣಾನಿ - ೪ನೇ ಸಂಪುಟ - (Vol. IV) ಶ್ರೀಮಧ್ವರಾದ್ಧಾಂತ ಸಂವರ್ಧಕ ಸಭಾ ಪ್ರಕಟಣೆ - ಪುಟ ೮೪ ನೋಡಿ). ಈ ಬಗ್ಗೆ ಸರ್ವಜ್ಞಕಲ್ಪರಾದ ಶ್ರೀಮಟ್ಟೀಕಾಕೃತ್ಪಾದರು ''ಕಾನೀನ'' ಶಬ್ದಕ್ಕೆ ಟೀಕೆಬರೆಯುತ್ತ ''ಕನ್ಯಾಯಾಃ ಕನೀನ ಚ । **ವೃದ್ಧ್ಯಭಾವಶ್ಛಾಂದಸಃ । ಅಪತ್ಯತ್ವೋಕ್ತ್ಯಾ ಪ್ರಾಪ್ತಂ** ಪ್ರಾಕೃತತತ್ವಭ್ರಾಂತಿಮಪಾಕರ್ತುಂ ಪರ ಇತ್ಯುಕ್ತಮ್ ॥'' ಎಂದು ಅಪ್ಪಣೆ ಕೊಡಿಸಿರುವರು. (ಪೂರ್ವೋಕ್ತ ಗ್ರಂಥದ ಪುಟ ೮೪ ನೋಡಿ). ಈ ಟೀಕಾ ವಚನಕ್ಕೆ ವಿವರಣೆಯನ್ನು ನೀಡುತ್ತಾ ಶ್ರೀಮದ್ರಾಘವೇಂದ್ರತೀರ್ಥರು ತಮ್ಮ 'ಭಾವದೀಪ'-ದಲ್ಲಿ ಹೀಗೆ ಹೇಳಿರುವರು :

**ಕನೀನ ಇತ್ಯಸ್ಯ ಕಾನೀನ ಇತ್ಯುಕ್ತಿಂ ಸಾಧಯತಿ – ನತನ್ಯಾಯಾ ಇತಿ ಕನ್ಯಾಶಬ್ದಾದಪತ್ಯೇಽರ್ಥೇ ಪರಃ ಪ್ರತ್ಯಯಃ ; ಕನ್ಯಾ ಪದಸ್ಯ ಕನೀನಾದೇಶಶ್ಚ ಭವತೀತಿ ಸೂತ್ರಾರ್ಥಃ । ತರ್ಹಿ ತದ್ಧಿತ್ಯೇಷಾಚಾಮಾದೇಃ ಇತಿ ವೃದ್ಧ್ಯಾಭಾವ್ಯಮ್ । ಮಂತ್ರೇ ಕಥಂ ಕನೀನ ಇತ್ಯುಕ್ತಿರಿತ್ಯತ ಆಹ – ವೃದ್ಧ್ಯ ಭಾವ ಇತಿ ಅಪತ್ಯತ್ವೋಕ್ತ್ಯೈತಿ । ಛಾಂದಸ ಕನೀನ ಶಬ್ದೇನೇತಿ ಭಾವಃ । ತಥೇತಿ । ಪ್ರಾಕೃತತತ್ವಭ್ರಮನಿರಾಸೋ ಯಥಾ ಭವತಿ ತಥೇತ್ಯರ್ಥಃ ॥**

– (Ibid - 1972 Edn., Page - 84)

ಇಲ್ಲಿ ಸರ್ವಜ್ಞಕಲ್ಪರಾದ ಶ್ರೀಟೀಕಾಚಾರ್ಯರು ಉದಾಹರಿಸಿದ ''ಕನ್ಯಾಯಾಃ ಕನೀನ ಚ'' ಎಂಬ ಪಾಣಿನೀಸೂತ್ರದಲ್ಲಿ ''ಯೋಗವಿಭಾಗಾದಿಷ್ಟಸಿದ್ಧಿಃ'' ಎಂಬ ವ್ಯಾಕರಣ

ಪರಿಭಾಷಾನುಸಾರವಾಗಿ ''ಕನ್ಯಾಯಾಃ'' ಎಂದೂ ಮತ್ತು ''ಕನೀನ ಚ'' ಎಂದೂ ಪಾಣಿನೀಸೂತ್ರವನ್ನು ಎರಡಾಗಿ ವಿಭಾಗ ಮಾಡಬೇಕು. ಇದರಲ್ಲಿ ಮೊದಲನೇ ''ಕನ್ಯಾಯಾಃ'' ಎಂಬ ಯೋಗಕ್ಕೆ, ಅಂದರೆ ಸೂತ್ರಕ್ಕೆ ಅಪತ್ಯಾರ್ಥದಲ್ಲಿ 'ಕಾನೀನ' ಶಬ್ದವು ಸಿದ್ಧಿಸುವುದು. ಇಲ್ಲಿ 'ಕಾನೀನ' ಎಂದರೆ ಕರ್ಣ ಎಂದರ್ಥ. ಕೆಳಗಿನ ಸೂತ್ರದಿಂದ ಮೇಲಿನ ಸೂತ್ರಕ್ಕೆ ಕನೀನ ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳತಕ್ಕದ್ದು. ಇದನ್ನೇ ''ಅಪಕರ್ಷಾನುವೃತ್ತಿ'' ಎಂದೆನ್ನುವರು. In rare cases, it is taken backwards in a sutra work from a subsequent rule to a previous rule when it is called 'ಅಪಕರ್ಷಾನುವೃತ್ತಿ', ಈ ವ್ಯಾಖ್ಯಾನವು ಅಪತ್ಯಾರ್ಥದಲ್ಲಿ ಕುಂತೀಗರ್ಭ ಸಂಜಾತನಾದ ಕರ್ಣನ ವಿಷಯದಲ್ಲಿ ಸರಿಹೋಗುವುದು. ಕಾನೀನಃ = ಕರ್ಣಃ || ಆದರೆ, ಅಗಣ್ಯಗುಣಮಂಡಿತನು, ಸರ್ವೋತ್ತಮನಾದ ಶ್ರೀವೇದವ್ಯಾಸರ ವಿಷಯದಲ್ಲಿ ''ಕನೀನ ಚ'' ಎಂಬ ಸೂತ್ರವನ್ನು ಯೋಜನೆ ಮಾಡತಕ್ಕದ್ದು. ಇಲ್ಲಿ ಕೇವಲ ಸ್ವಾರ್ಥದಲ್ಲಿ ಮಾತ್ರವೇ ತದ್ಧಿತ ಪ್ರತ್ಯಯವು ಬರುವುದು. ಅಪತ್ಯಾರ್ಥದಲ್ಲಿ ಅಲ್ಲವೇ ಅಲ್ಲ. ಆದಕಾರಣ ''ಕನೀನ ಏವ ಕಾನೀನಃ'' ಎಂದು ವ್ಯಾಖ್ಯಾನಿಸಬೇಕು. ಸರ್ವಜ್ಞಕಲ್ಪರಾದ ಶ್ರೀಮಟ್ಟೀಕಾಚಾರ್ಯರು ಇಂತಹ ರಹಸ್ಯಾಭಿಪ್ರಾಯವನ್ನೇ ಹೃದಯದಲ್ಲಿಟ್ಟುಕೊಂಡು ''ಕನ್ಯಾಯಾಃ ಕನೀನ ಚ'' ಎಂಬ ಪಾಣಿನೀಸೂತ್ರವನ್ನುದಾಹರಿಸಿರುವರು. ಶ್ರೀಟೀಕಾರಾಯರ ಹೃದಯವು ಶ್ರೀವೇದವ್ಯಾಸರ ವಿಷಯದಲ್ಲಿ ಅಪತ್ಯಾರ್ಥವು ಅಲ್ಲವೇ ಅಲ್ಲ. ಕೇವಲ ''ಸ್ವಾರ್ಥ''ದಲ್ಲಿ ಮಾತ್ರವೇ ಎಂದು ಶ್ರೀಜಯತೀರ್ಥಶ್ರೀಮಚ್ಚರಣರ ಆಕೂತವು. ಈ ರಹಸ್ಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಶ್ರೀಮನ್ಮಂತ್ರಾಲಯ ಪ್ರಭುಗಳು ಈ ಋಗರ್ಥವನ್ನೇ ವ್ಯಾಖ್ಯಾನಿಸುತ್ತಾ ''ಕನೀನಃ ಪರಃ ಸರ್ವೋತ್ತಮೋ ಬಾದರಾಯಣಃ'' ಎಂದು ಸುಸ್ಪಷ್ಟವಾಗಿ ಪ್ರತಿಪಾದಿಸಿರುವರು. (ಪೂರ್ವೋಕ್ತ 1972 Edn., ಪುಟ 85 ನೋಡಿ). ಅಂದರೆ ''ಕನೀನಃ ಕಮನೀಯೋ ಭವತಿ'' ಎನ್ನುವ ನಿರುಕ್ತಶಾಸ್ತ್ರವಚನಾನುಸಾರವಾಗಿ ''ಕನೀನಃ = ಕಮನೀಯಃ = ಅತ್ಯಂತ ಸುಂದರಾಕೃತಿಃ ಪರಃ ಸರ್ವೋತ್ತಮೋ ಬಾದರಾಯಣಃ'' ಎಂಬುದಾಗಿ ಶ್ರೀಮನ್ಮಧ್ವರಾಯರ ಆಶಯವೆಂದು ಶ್ರೀಟೀಕಾಕೃತ್ಪಾದರ ಹಾರ್ದವೆಂದು ಶ್ರೀಮಂತ್ರಾಲಯಪ್ರಭುಗಳ ಅಭಿಪ್ರಾಯವು.

ಈ ವಿಷಯವನ್ನೇ ಪುನಃ ನಿರ್ಧಾರಣೆ ಮಾಡುತ್ತಾ ಅವ್ಯವಹಿತಕರ್ಮನಿರ್ಣಯೋದಾಹೃತ ''ಅರ್ಭಕೋಸಕುಮಾರಕೋ'' ಎನ್ನುವ ಮಂತ್ರವನ್ನು ವ್ಯಾಖ್ಯಾನಿಸುವ



ಸಂದರ್ಭದಲ್ಲಿ ಶ್ರೀಟೀಕಾಕೃತ್ಪಾದರು ''ನ ಕುಮಾರಕೋ ನಕಸ್ಯಾಪ್ಯಪತ್ಯಮ್'' ಎಂಬುದಾಗಿ ವ್ಯಾಖ್ಯಾನಿಸಿ ಸಾತ್ವಿಕ ಜನರನ್ನನುಗ್ರಹಿಸಿದರು (Ibid - Page 85) ಈ ಪರಮರಹಸ್ಯವಾದ ಶ್ರೀಟೀಕಾಕೃತ್ಪಾದರ ವಚನವನ್ನು ವಿವರಣೆ ಮಾಡುತ್ತಾ ಶ್ರೀಮಂತ್ರಾಲಯ ಪ್ರಭುಗಳು 'ಕನೀನ ಶಬ್ದೋ ವ್ಯಾಸ ಉಪಚರಿತಃ ಪ್ರಕಾರಾಂತರೇಣ ವಾ ನಿರ್ವಕ್ತಿ ||' ಎಂದು ಸ್ಪಷ್ಟೀಕರಿಸುತ್ತಾ ಋಗರ್ಥದಲ್ಲಿ ''ಯದ್ವಾ ನ ಕುಮಾರಕಃ ನ ಕಸ್ಯಾಪ್ಯಪತ್ಯಭೂತಃ'' ಎಂದು ನಿರೂಪಿಸಿರುವರು. ಏತಾವತಾ ಶ್ರೀವೇದವ್ಯಾಸರ ವಿಷಯದಲ್ಲಿ ಅಪತ್ಯಾರ್ಥಕ ತದ್ಧಿತ ಪ್ರತ್ಯಯವು ಬರುವುದೇ ಇಲ್ಲವೆಂದು ಈ ಮೂರ್ವರ ನಿಶ್ಚಿತಾಭಿಪ್ರಾಯವು (ಮೇಲಿನ ವಿಷಯವನ್ನು ''ದಶಪ್ರಕರಣಾನಿ'' ಶ್ರೀಮನ್ಮಧ್ವರಾದ್ಧಾಂತ ಸಂವರ್ಧಕ ಸಭಾ ೧೯೭೨ ಪ್ರಕಟಣೆ, ಕರ್ಮನಿರ್ಣಯ ಪ್ರಕರಣ, ಪುಟ ೮೪, ೮೫, ೮೬ ನೋಡತಕ್ಕದ್ದು).

ಶ್ರೀಮನ್ಮಧ್ವಗುರುಗಳ ''ಕಾನೀನೋ ಬಾದರಾಯಣಃ'' ಎಂಬ ವಾಕ್ಯಗತ ಕನೀನ ಶಬ್ದವು ಕೇವಲ ಸ್ವಾರ್ಥದಲ್ಲೇ ಪ್ರಯೋಗಿಸಲ್ಪಟ್ಟಿದೆ. ''ಕನೀನ ಏವ ಕಾನೀನಃ'' ಎಂಬುದಾಗಿ ಆ ವಾಕ್ಯಾರ್ಥವು. ಶ್ರೀಬಾದರಾಯಣರ ವಿಷಯದಲ್ಲಿ ''ಕನ್ಯಾಯಾ ಅಪತ್ಯಂ'' ಎಂದು ವ್ಯಾಖ್ಯಾನಿಸಬಾರದು. ಅಪತ್ಯಾರ್ಥದಲ್ಲಿಯಾದರೆ ಶ್ರೀಮನ್ಮಹಾಭಾರತ ಶಾಸ್ತ್ರಕ್ಕೆ ವಿರುದ್ಧವು. ಕಾರಣ ಪಾತಂಜಲ ಮಹಾಭಾಷ್ಯದಲ್ಲಿ ''ಕನ್ಯಾಯಾಃ ಕನ್ಯೋಕ್ತಾಯಾಃ ಕನ್ಯಾಭಿಮತಾಯಾಃ ಸುದರ್ಶನಾಯಾಯದಪತ್ಯಂ ಸಕಾನೀನ ಇತಿ'' (ಕನ್ಯಾಯಾಃ ಕನೀನ ಚ - ೪-೧-೧೧೬ ಸಂದರ್ಭದಲ್ಲಿ ನೋಡಿ) ಎಂದು ವ್ಯಾಖ್ಯಾನಿಸಲ್ಪಟ್ಟಿದೆ. ಈ ಬಗ್ಗೆ ಪ್ರದೀಪಕಾರ ಶ್ರೀಕೈಯಟೋಪಾಧ್ಯಾಯನು ''ಸುದರ್ಶನಾಯ ಇತಿ | ಪ್ರಕಟದರ್ಶನಾಯಾಃ ಅಗುಪ್ತತ್ವಾದಿತ್ಯರ್ಥಃ ಅನ್ಯೇತ್ಯಾಹುಃ || ಮುನಿದೇವತಾ ಮಹಾತ್ಮ್ಯಾದ್ವಾ ಪುಂಯೋಗೇಽಪ್ಯಕ್ಷತ ಯೋನಿರ್ಭವತಿ | ಯಥಾಕುಂತೀ ಮಂತ್ರಾಹೂತ ದಿನಕರೋತ್ಪಾದಿತಕರ್ಣಾಖ್ಯಪುತ್ರಾಪಿ ಪುನಃ ಕನ್ಯೈವಾಭೂತ್ | ತದಪತ್ಯಂ ಕಾನೀನ ಶಬ್ದಾಭಿದೇಯಮ್ ||'' ಇದನ್ನೇ ಪ್ರದೀಪೋದ್ಯೋತಕಾರನಾದ ಶ್ರೀನಾಗೇಶಭಟ್ಟನು ಸ್ಪಷ್ಟೀಕರಿಸಿರುವನು. ಅಂತತೋ ಗತ್ವಾ ಮಹಾಭಾಷ್ಯಕಾರನಾದ ಪತಂಜಲಿ, ಶ್ರೀಕೈಯಟೋಪಾಧ್ಯಾಯ, ಶ್ರೀನಾಗೇಶಭಟ್ಟ ''ಕಾನೀನಃ = ಕರ್ಣಃ'' ಎಂದು ಉದಾಹರಿಸಿ ವ್ಯಾಖ್ಯಾನಿಸಿರುವರೇ ಹೊರತು ''ಕಾನೀನೋ ವ್ಯಾಸಃ'' ಎಂದು ಹೇಳಲಿಲ್ಲ. ಇದನ್ನು ಸಾತ್ವಿಕರು ಗಮನಿಸತಕ್ಕದ್ದು.

(ಮುಂದುವರೆಯುವುದು)

ಲೇಖನಾಂಕ

# ತಮಿಳುನಾಡಿನ ನವಗ್ರಹ ದೇವಾಲಯಗಳು - ೫

ಸಂಗ್ರಹ : **ಸೂರೀಂದ್ರ**
ಬೆಂಗಳೂರು

**ಗ್ರ**ಹಗಳು ಪ್ರತಿಯೊಬ್ಬನ ಜನನಕಾಲದಿಂದಲೇ ಸಂಚರಿಸಲು ಪ್ರಾರಂಭವಾಗುತ್ತವೆ. ಭಾರತದಲ್ಲಿಯೇ ಅಪರೂಪವಾದ ನವಗ್ರಹಗಳ ದೇವಾಲಯವು ತಮಿಳುನಾಡಿನಲ್ಲಿರುವುದು ಎಷ್ಟೋ ಜನರಿಗೆ ತಿಳಿಯದ ವಿಷಯವಾಗಿದೆ. ಪ್ರತಿಯೊಂದು ಗ್ರಹವೂ ನಮ್ಮ ಮೇಲೆ ಅದರದೇ ಆದ ಪರಿಣಾಮವನ್ನು ಬೀರುತ್ತದೆ. ಗ್ರಹಗಳು ಬೀರುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಅನೇಕ ವಿಧವಾದ ಶಾಂತಿಗಳನ್ನು ಮಾಡಿಸುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಸಾಮಾನ್ಯ. ಅಷ್ಟೇ ಅಲ್ಲದೆ, ಬಾಧಿತರು ತಮ್ಮ ಕಷ್ಟಗಳಿಗೆ ತಮಿಳುನಾಡಿನಲ್ಲಿರುವ ಈ ನವಗ್ರಹ ದೇವಾಲಯಗಳನ್ನು ಸಂದರ್ಶಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಮೂಲಕ ತಮಿಳುನಾಡಿನ ನವಗ್ರಹ ದೇವಸ್ಥಾನಗಳು ಎಂಬ ಸರಮಾಲೆಯಲ್ಲಿ ಒಂಭತ್ತು ನವಗ್ರಹ ದೇವಸ್ಥಾನಗಳನ್ನು, ಅವುಗಳು ನಿರ್ಮಾಣವಾಗಿರುವ ಜಾಗದ ಹೆಸರುಗಳು, ಕ್ಷೇತ್ರದ ಇತಿಹಾಸ, ದೇವಸ್ಥಾನಗಳ ನಕ್ಷೆ - ವಿನ್ಯಾಸ, ಅಲ್ಲಿನ ಪವಿತ್ರ ತೀರ್ಥಗಳು, ಪವಿತ್ರ ವೃಕ್ಷಗಳ ಬಗ್ಗೆ ತಿಳಿಸಿಕೊಡಲಿದ್ದೇವೆ.

ಈ ಎಲ್ಲ ದೇವಸ್ಥಾನಗಳು ಕುಂಭಕೋಣದ ಆಸುಪಾಸಿನಲ್ಲಿವೆ. ಭಕ್ತರು ಕುಂಭಕೋಣದಲ್ಲಿರುವ ಸೋಲೆಯಪ್ಪನ್ ರಸ್ತೆಯಲ್ಲಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಈ ಎಲ್ಲಾ ನವಗ್ರಹ ದೇವಸ್ಥಾನಗಳನ್ನು ಸಂದರ್ಶಿಸಬಹುದಾಗಿದೆ. ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯು ಇರುತ್ತದೆ. ಕುಂಭಕೋಣದಲ್ಲಿನ ವ್ಯವಸ್ಥೆಗಾಗಿ ಅಲ್ಲಿನ ಶ್ರೀಮಠಕ್ಕೆ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ. **0435-2425448.**

## 5. ಬುಧ

ಕುಂಭಕೋಣದಿಂದ ೨೮ ಕಿ.ಮೀ. ದೂರದಲ್ಲಿ ಬುಧನ ದೇವಸ್ಥಾನವಿದೆ. ಬುಧನಿರುವ ತಿರುವೆಂಕಟಕ್ಕೆ (ತಿರುವೆಂಕಾಡಲ್) ಬಸ್ಸಿನಲ್ಲಿ ಹೋಗಲು ಮಾನಿಲನು ಕುರ್ರೈ ಎಂಬ ಸ್ಥಳದಿಂದ ಉತ್ತರದಲ್ಲಿ ಹೋಗಿ ಈ ಜಾಗವನ್ನು ತಲುಪಬಹುದು.




ಬುಧನು ವಿಜ್ಞಾನ ಮತ್ತು ಕಲೆಗೆ ಅಧಿಪತಿಯಾಗಿರುವನು. ಬುಧನು ಲಿಂಗಾಕಾರದಲ್ಲಿದ್ದು, ಅವನು ಕುಳಿತಿರುವ ಪೀಠವು ಬಾಣಾಕಾರವುಳ್ಳದ್ದಾಗಿದೆ. ಆತನು ಅಶ್ವಾರೂಢನಾಗಿದ್ದು, ಸಿಂಹದ ಗುರುತಿನ ಧ್ವಜವನ್ನು ಅವನ ರಥವು ಹೊಂದಿರುತ್ತದೆ. ಚತುರಶ್ವೋಪೇತ ರಥವುಳ್ಳವನಾದ ಬುಧನು ಸದಾ ಕಾಲವೂ ಬಿಳಿಯ ಹೂವುಗಳಿಂದ ಅಲಂಕೃತನಾಗಿರುವನು. ಆದುದರಿಂದಲೇ ಬುಧನನ್ನು ಶುಭ್ರಗ್ರಹವೆಂದು ಹೇಳುತ್ತಾರೆ. ಬುಧ ದೋಷ ಪರಿಹಾರಕ್ಕಾಗಿ ಋಗ್ವೇದದ ಆರನೇ ಅಧ್ಯಾಯವನ್ನು ಪಠಣ ಮಾಡುವುದು ವಾಡಿಕೆ.

### ಬುಧದೋಷ ಪರಿಹಾರ

ಬುಧದೆಶೆಯ ಅವಧಿ ೧೭ ವರ್ಷಗಳ ಕಾಲ. ಬುಧನು ಕನ್ಯಾರಾಶಿಯ ಅಧಿಪತಿಯಾಗಿ, ಜೀವರ ವಿದ್ಯಾಭ್ಯಾಸದ ಬಗ್ಗೆ ನಿರ್ಣಯವನ್ನು ನೀಡುವವನಾಗಿರುತ್ತಾನೆ. ಬುಧನ ದೋಷ ಪರಿಹಾರಕ್ಕಾಗಿ ಬಿಳಿಯ ವಸ್ತ್ರವನ್ನು ಧರಿಸಿ ಚಿನ್ನವನ್ನು ದಾನ ಮಾಡಬೇಕು. ಪ್ರತಿನಿತ್ಯವೂ ಸಂಜೆಯಲ್ಲಿ ವಿಷ್ಣುಸಹಸ್ರನಾಮವನ್ನು ಪಾರಾಯಣ ಮಾಡುವುದು ಸೂಕ್ತ. ಕಷ್ಟ ಪರಿಹಾರಕ್ಕಾಗಿ ಬುಧವಾರದ ದಿನದಂದು ಉಪವಾಸ ಮಾಡುವುದು ಕೆಲವರಲ್ಲಿ ಉಂಟು. ನಮಗೊದಗುವ ಕೆಟ್ಟಕಾಲದಲ್ಲಿ ನಮ್ಮ ಜಾತಕದಲ್ಲಿ ಬುಧನು ಉಚ್ಚಸ್ಥಾನದಲ್ಲಿದ್ದರೆ ಕಲೆ ಮತ್ತು ವಿಜ್ಞಾನದೆಡೆಗೆ ಪ್ರೋತ್ಸಾಹ ನೀಡುವ ಮೂಲಕ ವಿದ್ಯಾಭ್ಯಾಸದಲ್ಲಿ, ಜಾಣತನದಲ್ಲಿ, ಬುದ್ಧಿವಂತಿಕೆಯ ವಿಷಯದಲ್ಲಿ ಸಹಾಯಕನಾಗಿರುವನು. ಇತರ ಗ್ರಹಗಳು ನಮ್ಮ ಮೇಲೆ ಮಾಡುವ ದುಷ್ಪರಿಣಾಮಗಳನ್ನು ದೂರಮಾಡುವ ಶಕ್ತಿಯನ್ನೂ ಕೂಡ ಬುಧನು ಹೊಂದಿರುತ್ತಾನೆ.

ಈ ಕ್ಷೇತ್ರದಲ್ಲಿ ಅಗ್ನಿತೀರ್ಥ, ಸೂರ್ಯತೀರ್ಥ ಮತ್ತು ಚಂದ್ರತೀರ್ಥವೆಂಬ ಮೂರು ಪುಷ್ಕರಣಿಗಳು ಇದ್ದು ಇವುಗಳನ್ನು ಪವಿತ್ರತೀರ್ಥಗಳೆಂದು ಕರೆಯುತ್ತಾರೆ. ಈ ದೇವಸ್ಥಾನಕ್ಕೆ ''ಶ್ವೇತವರಾಹ'' ಎಂಬ ಹೆಸರು ಕೂಡಾ ಇದೆ. ಈ ದೇವಸ್ಥಾನಕ್ಕೆ ಪೂರ್ವದ ಮೂಲೆಯಲ್ಲಿನ ದ್ವಾರದ ಮೂಲಕ ಪ್ರವೇಶಿಸಬಹುದು. ಗೋಪುರದಲ್ಲಿ ಐದು ಭಾಗಗಳಿವೆ. ಈ ದೇವಸ್ಥಾನದಲ್ಲಿರುವ ತಿರುವೆಂಕಟ ವಿಗ್ರಹವು ಬುಧನೆಂದು ಪ್ರಸಿದ್ಧಿಯಾಗಿದೆ. ಬುಧನ ವಿಗ್ರಹವು ಆಲದ ಮರದ ಕೆಳಗಿದೆ. ಈ ದೇವಸ್ಥಾನದಲ್ಲಿರುವ ಚಂದ್ರತೀರ್ಥದ ಪೂರ್ವಭಾಗದಲ್ಲಿ ಬೃಹತ್ ಅರಳೀಮರವೊಂದಿದ್ದು, ಆ ಸ್ಥಳದಲ್ಲಿ ಚಂದ್ರನು ಪೂಜಿಸಿದ ಶಿವಲಿಂಗವನ್ನು ಕೂಡಾ ನಾವು ಕಾಣಬಹುದು. ಮಕ್ಕಳನ್ನು ಅಪೇಕ್ಷಿಸುವವರು ಇಲ್ಲಿನ ಮೂರು ಕೊಳಗಳಲ್ಲಿ ಸ್ನಾನಮಾಡಿ ದೇವರನ್ನು ಪ್ರಾರ್ಥಿಸಿದರೆ ಮಕ್ಕಳಾಗುತ್ತದೆ ಎಂಬುದು ಇಲ್ಲಿನ ಸ್ಥಳೀಯರ ಆಂಬೋಣ.

❑❑




ನಿಮ್ಮ ತರ್ಕಕ್ಕಾಗಿ

ಇದೊಂದು ಹೊಸ ಕಾಲಂ. ಸಮಾಜದಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಕುರಿತ ಲೇಖನಗಳ ಬಗೆಗಿನ ಒಂದು ಇಣುಕುನೋಟ ಇದಾಗಿದೆ. ಇದನ್ನು ವಿಮರ್ಶಿಸುವ, ಪರಾಂಬರಿಸುವ ಯುಕ್ತಿ ನಿಮ್ಮದಾಗಿದೆ. ಈ ಲೇಖನವು 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ದಿನಾಂಕ ೧೭-೦೪-೨೦೦೭ ರಂದು ಪ್ರಕಟವಾಗಿದ್ದು, ಯಜ್ಞ-ಯಾಗಕ್ಕೂ, ವಿಜ್ಞಾನಕ್ಕೂ ಇರುವ ಸಂಬಂಧವನ್ನು ಅನಾವರಣಗೊಳಿಸುತ್ತದೆ.

– ಸಂ.

# ಸೋಮಯಾಗಕ್ಕೆ ಮಳೆ ಬರಿಸುವ ಶಕ್ತಿ ಇದೆಯೇ?

## ವಿಜ್ಞಾನಿಗಳ ತಂಡದ ಅಧ್ಯಯನ

ಯಜ್ಞ-ಯಾಗಕ್ಕೂ, ವಿಜ್ಞಾನಕ್ಕೂ ಎತ್ತಣದ ಸಂಬಂಧವಯ್ಯ ಎಂದು ಕೇಳದಿರಿ. ಈಗ ಯಜ್ಞದ ಬಗ್ಗೆ ವಿಜ್ಞಾನ ಜಗತ್ತು ಬೆರಗುಗಣ್ಣಿನಿಂದ ನೋಡುತ್ತಿದೆ!

ದಿನಾಂಕ ೧೭ ರಿಂದ ೧೫ ದಿನಗಳ ಕಾಲ ನಗರದ ಶ್ರೀಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆದ ಸೋಮಯಾಗವನ್ನು ವಿಜ್ಞಾನಿಗಳ ತಂಡ ಅಧ್ಯಯನಕ್ಕೆ ಒಳಪಡಿಸಲಿದೆ.

ನಿಮ್ಹಾನ್ಸ್, ಇಸ್ರೋ, ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿಗಳು, ಹೃದ್ರೋಗ ತಜ್ಞರೂ ಯಜ್ಞದಲ್ಲಿ ಭಾಗವಹಿಸಿ ಪರಿಣಾಮಗಳ ಅಧ್ಯಯನ ನಡೆಸುತ್ತಾರೆ. ಈ ಯಾಗದಿಂದ ಹೃದ್ರೋಗದ ಮೇಲೆ ಯಾವ ಪರಿಣಾಮ ಉಂಟಾಗುತ್ತದೆಂದು ಅಭ್ಯಸಿಸುತ್ತಾರೆ. ಸಸ್ಯದ ಬೆಳವಣಿಗೆ, ಹವಾಮಾನದ ಮೇಲಿನ ಪರಿಣಾಮವನ್ನು ನೋಡುತ್ತಾರೆ. ಋತ್ವಿಜರು, ಭಾಗವಹಿಸಿದವರ ಮೇಲಾಗುವ ಮಾನಸಿಕ ಪರಿಣಾಮ, ಸುತ್ತಮುತ್ತ ಶಕ್ತಿವಲಯ ನಿರ್ಮಾಣವಾಗುವುದರ ಬಗ್ಗೆ ವಿಜ್ಞಾನಿಗಳು ತಮ್ಮ ಉಪಕರಣಗಳಿಂದ ಅಧ್ಯಯನ ನಡೆಸುತ್ತಾರೆ.

ವಿದೇಶೀ ವಿಜ್ಞಾನಿಗಳೂ ತಂಡದಲ್ಲಿ ಇರುತ್ತಾರೆ. ಯಾಗಕ್ಕೆ ಮುನ್ನ ಮತ್ತು ಪೂರ್ಣಗೊಂಡ ಬಳಿಕ ನಾಲ್ವರು ಪ್ರಮುಖ ಋತ್ವಿಜರನ್ನು ನಿಮ್ಹಾನ್ಸ್‌ನಲ್ಲಿ ದೈಹಿಕ ಮತ್ತು ಮಾನಸಿಕ ಪರೀಕ್ಷೆಗೆ ಒಳಪಡಿಸಿ ಪರಿಣಾಮ ಗಮನಿಸಲಾಗುತ್ತದೆ.

ಮಳೆ-ಬೆಳೆ ಸಂವೃದ್ಧಿಯಾಗಲಿ, ಲೋಕಕ್ಕೆ ಕಲ್ಯಾಣವಾಗಲಿ ಎಂಬುದು ಸೋಮಯಾಗದ ಮುಖ್ಯ ಉದ್ದೇಶ. ಬೆಂಗಳೂರಿನಲ್ಲಿ ೪೦ ವರ್ಷಗಳ ಬಳಿಕ ಅಪರೂಪದ ಸೋಮಯಾಗ ವಿಜ್ಞಾನಿಗಳ ಸಮ್ಮುಖದಲ್ಲಿ ನಡೆಯುತ್ತಿದೆ.



ಯಾಗದ ಶಕ್ತಿಯನ್ನು ವೈಜ್ಞಾನಿಕವಾಗಿ ಒರೆಗೆ ಹಚ್ಚುವ ಕೆಲಸವೂ ಈ ಸಂದರ್ಭದಲ್ಲೇ ನಡೆಯುತ್ತದೆ. ಸೋಮಯಾಗ ಮಾಡಿದರೆ ಮಳೆ ಬರುವುದಕ್ಕೆ ಆಧಾರವಿದೆಯೇ? ಎಂದರೆ ಉತ್ತರ :-

೨೦೦೪ ರಲ್ಲಿ ಕೇರಳದ ತ್ರಿಶೂರು ಪಟ್ಟಣ ಬರದಿಂದ ಕಂಗೆಟ್ಟಿತ್ತು. ಮಳೆ ಉದ್ದೇಶದಿಂದಲೇ ಸೋಮಯಾಗ ಮಾಡಿಸಿ ಮುಗಿಸಿದ ತಕ್ಷಣವೇ ಮಳೆ ಬಂದಿತು. (ಪೂಜ್ಯ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಸೋಮಯಾಗವನ್ನು ಒಂದು ವಾರಗಳ ಕಾಲ ಮಂತ್ರಾಲಯ ಕ್ಷೇತ್ರದಲ್ಲಿ ನೆರವೇರಿಸಿದ ಸಂದರ್ಭದಲ್ಲಿಯೂ ಮಳೆ ಧಾರಾಕಾರವಾಗಿ ಸುರಿದಿದ್ದನ್ನು ಇಲ್ಲಿ ಸ್ಮರಿಸಬಹುದು).

ಈ ಯಾಗದಲ್ಲಿ ವೇದಿಕೆಯನ್ನು ಗರುಡಾಕೃತಿಯ ರೂಪದಲ್ಲಿ ನಿರ್ಮಿಸಲಾಗುತ್ತದೆ. ವೇದಗಣಿತದ ಶುಲ್ಬಸೂತ್ರಗಳನ್ನು ಆಧರಿಸಿ ಗರುಡಾಕೃತಿಯಲ್ಲಿ ಯಜ್ಞವೇದಿಕೆ ರೂಪಿಸಲಾಗುತ್ತದೆ. ವೇದಿಕೆ ಮೇಲೆ ಮೂರು ಕುಂಡಗಳಿರುತ್ತವೆ.

ಈ ಯಾಗದ ಅಧ್ಯಯನಕ್ಕಾಗಿ ಬೆಂಗಳೂರಿನಲ್ಲಿ ವಿಜ್ಞಾನಿಗಳ ತಂಡವೇ ಬೀಡು ಬಿಟ್ಟಿದೆ. ಈ ತಂಡದಲ್ಲಿ ಕೇರಳದ ನರರೋಗ ತಜ್ಞ ಡಾ. ಟಿ.ಐ. ರಾಧಾಕೃಷ್ಣನ್, ರಾಷ್ಟ್ರೀಯ ವೈಮಾನಿಕ ಸಂಸ್ಥೆಯ ನಿವೃತ್ತ ಉಪನಿರ್ದೇಶಕ ಡಾ. ಪಿ. ರಾಮಮೂರ್ತಿ, ಕೇರಳ ಕೃಷಿ ವಿ.ವಿ.ಯ ಡಾ. ಮುಕುಂದನ್, ಜಿ.ಕೆ.ವಿ.ಕೆ. ಕೃಷಿ ಸೂಕ್ಷ್ಮ ಜೀವಕೋಶ ವಿಭಾಗದ ಮುಖ್ಯಸ್ಥ ಡಾ. ಡಿ. ರಾಧಾಕೃಷ್ಣನ್, ಎನ್.ಎ.ಎಲ್. ವಿಜ್ಞಾನಿ ಡಾ. ರಂಜನ್ ಮಡಿತ್ತಾಯ, ಪಾಂಡಿಚೇರಿ ಜೆ.ಐ.ಪಿ.ಎಂ.ಇ.ಆರ್. ನಿರ್ದೇಶಕ ಡಾ. ಮದನ್ ಮೋಹನ್, ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಡಾ. ಓಂಕಾರ್, ಹೃದ್ರೋಗ ತಜ್ಞ ಡಾ. ಎಸ್.ಸಿ. ಶರ್ಮ ಮತ್ತು ಆಕಾಶ ಶಿಕ್ಷಣ ಮತ್ತು ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ. ಪೋದ್ದಾರ್ ಭಾಗವಹಿಸಿ ಅಧ್ಯಯನವನ್ನು ನಡೆಸಲಿದ್ದಾರೆ.

❑❑ ❑❑

## ಬೆಂಗಳೂರಿನಲ್ಲಿ ಧಾರಾಕಾರ ಮಳೆ

ಇಡೀ ಕರ್ನಾಟಕದ ಭಾಗಗಳು ಬಿಸಿಲ ಬೇಗೆಯಿಂದ ಹತ್ತಿ ಉರಿಯುತ್ತಿದ್ದರೆ, ಬೆಂಗಳೂರು ಮಾತ್ರ ತಣ್ಣಗಾಗಿದೆ. ಇದಕ್ಕೆ ಕಾರಣ, ಬೆಂಗಳೂರಿನಲ್ಲಿ ನಡೆಯುತ್ತಿರುವ ಸೋಮಯಾಗದ ಫಲವೋ ಎನ್ನುವಂತೆ ಒಂದು ವಾರಗಳಿಂದ (ದಿನಾಂಕ ೧೮-೦೪-೨೦೦೭ ರಿಂದ) ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಈ ಮಳೆಯಿಂದ ಬೆಂಗಳೂರಿನ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಂತೂ ಇಂತೂ, ಈ ಮಳೆ ಸೋಮಯಾಗದಿಂದ ಬಂದದ್ದೋ ಅಥವಾ ಹವಾಮಾನ ರೀತ್ಯಾ ಬಂದದ್ದೋ ತಿಳಿಯಪಡಿಸಬೇಕಾದ್ದು ವಿಜ್ಞಾನಿಗಳ ಕರ್ತವ್ಯ. ಈ ಸುರಿಯುತ್ತಿರುವ ಮಳೆಯಂತೂ ಮಾನ್ಸೂನ್ ಮಳೆಯಲ್ಲ. ಹವಾಮಾನ ಇಲಾಖೆಯ ಪ್ರಕಾರ ಮಾನ್ಸೂನ್ ಮಳೆಯು ಕರ್ನಾಟಕಕ್ಕೆ ಜೂನ್ ೬ ರ ಹೊತ್ತಿಗೆ ಬರುವ ಸೂಚನೆ ಇದೆಯೆಂದು ತಿಳಿಸಿದೆ. ಹಾಗಾದರೆ ಈಗ ಸುರಿಯುತ್ತಿರುವ ಮಳೆಗೆ ಕಾರಣವೇನು?

– ಸಂ.

ಮಂತ್ರಾಲಯದಲ್ಲಿರುವ ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠವು ಪ್ರಾಚೀನ ಕಾಲದಿಂದಲೂ ಶ್ರೀಮಠಸ್ಥ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿರುವುದು ಎಲ್ಲರಿಗೂ ತಿಳಿದದ್ದೇ. ಪ್ರಸ್ತುತ, ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠವು **ಇಂದಿನ ಕಾಲಕ್ಕೆ ತಕ್ಕಂತೆ** ಮಕ್ಕಳಿಗೆ ಯೋಗ್ಯ ವಿದ್ಯೆಯನ್ನು ನೀಡಿ, ತಂದೆ-ತಾಯಂದಿರ ಹೊಣೆಯನ್ನು ಹೊತ್ತು ಸಮಾಜಸೇವೆ ಮಾಡಲು ನೂತನ ರೂಪದಲ್ಲಿ ಸಿದ್ಧವಾಗಿದೆ. **ಈ ವಿದ್ಯಾಪೀಠಕ್ಕೆ ತಮ್ಮ ಮಕ್ಕಳನ್ನು ಏಕೆ ಸೇರಿಸಬೇಕೆಂದರೆ –**

೧. ಸಂಸ್ಕೃತ ವಿದ್ಯಾಭ್ಯಾಸ(ಸಾಹಿತ್ಯ, ಶಾಸ್ತ್ರಪಾಠ)ದೊಂದಿಗೆ ಇಲ್ಲಿ ವೇದ, ಪೌರೋಹಿತ್ಯದ ಕಡ್ಡಾಯ ಶಿಕ್ಷಣವೂ ಇದೆ. ಇತ್ತೀಚೆಗೆ ನಮ್ಮ ವಿದ್ಯಾಪೀಠದ ವಿದ್ಯಾರ್ಥಿಗಳು ವೇದ ಪರೀಕ್ಷೆಯಲ್ಲಿ ದೇಶದಲ್ಲೇ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

೨. ಶಾಸ್ತ್ರಾಭ್ಯಾಸ ಮಾಡುವ ವಿದ್ಯಾರ್ಥಿಗಳ ವಿಶೇಷ ಅಧ್ಯಯನ ವ್ಯವಸ್ಥೆಗಾಗಿ ತಿರುಪತಿ, ರಾಜಮಹೇಂದ್ರಿ, ಹೈದರಾಬಾದಿನಿಂದ ವಿಶೇಷವಾಗಿ ಭೇಟಿ ನೀಡುವ ಪಂಡಿತ-ರಿಂದ ತರಬೇತಿಯನ್ನು ಕೊಡಿಸಲಾಗುವುದು.

೩. ಆಧುನಿಕ ವಿದ್ಯೆಯಾದ ಇಂಗ್ಲೀಷ್ ಅಧ್ಯಯನದೊಂದಿಗೆ ಕಂಪ್ಯೂಟರ್ ಶಿಕ್ಷಣ ಮತ್ತು ವಿಶೇಷವಾಗಿ ಉನ್ನತ ಮಟ್ಟದ ಆಂಗ್ಲ ಸಂಭಾಷಣೆಯಲ್ಲಿ (Spoken English) ಪರಿಣಿತರನ್ನಾಗಿ ಮಾಡಲು ಪ್ರತ್ಯೇಕ ಅಧ್ಯಾಪಕರಿಂದ ತರಬೇತಿ.

**ಸೌಕರ್ಯಗಳು :**

ವಸತಿಗಾಗಿ ಉತ್ತಮ ವಸತಿಯುಳ್ಳ ವಸತಿಗೃಹ, ಉಚಿತ ಉಪಹಾರ, ಭೋಜನ, ವರ್ಷಕ್ಕೆರಡು ಬಾರಿ ವಸ್ತ್ರ, ಉತ್ತಮ ವೈದ್ಯ ಸೌಲಭ್ಯ, ಪ್ರತಿತಿಂಗಳೂ ವಿದ್ಯಾರ್ಥಿವೇತನ, ಇನ್ನೂ ಅನೇಕ ಸೌಕರ್ಯಗಳು ಇಲ್ಲಿವೆ.

ಒಂದನೆಯ ತರಗತಿಯಿಂದ ಹನ್ನೆರಡನೆಯ ತರಗತಿಯವರೆಗೆ (ಸುಧಾಮಂಗಳ-ವಾಗುವವರೆಗೆ) ನಮ್ಮ ವಿದ್ಯಾಪೀಠದಲ್ಲಿ ಅವಿಚ್ಛಿನ್ನವಾಗಿ ಅಧ್ಯಯನ ಮಾಡಿದ ವಿದ್ಯಾರ್ಥಿಗೆ ವಿದ್ಯಾಭ್ಯಾಸವಾದ ನಂತರ **ಜೀವನ ಭತ್ಯೆಯಾಗಿ ಒಂದು ಲಕ್ಷ ರೂ.ಗಳನ್ನು ಕೊಡಲಾ-ಗುವುದು.**

ಪ್ರಮುಖವಾಗಿ ಮಕ್ಕಳು ಇಲ್ಲಿ ಹನ್ನೆರಡು ವರ್ಷಗಳ ಕಾಲ ಶ್ರೀಶ್ರೀಪಾದಂಗಳವರ ವಾತ್ಸಲ್ಯವನ್ನು ಸವಿಯುವ ಮೂಲಕ ಮಾತಾ-ಪಿತೃಗಳ ವಾತ್ಸಲ್ಯದ ಕೊರತೆಯನ್ನು ಅನುಭವಿಸು-ವುದಿಲ್ಲ ಮತ್ತು ಈ ಅವಕಾಶ ಸುಕೃತದಿಂದಲೇ ಲಭ್ಯ. ನಿತ್ಯ ಶ್ರೀಗುರುರಾಜರ ದರ್ಶನ ಭಾಗ್ಯ ಪಡೆದು ತಮ್ಮ ದುರಿತಗಳ ಕಳೆದುಕೊಂಡು ಪುನೀತರಾಗುತ್ತಾರೆ. **ಆಲಸ್ಯ ಮಾಡದೆ ಪ್ರಾಂಶುಪಾಲರನ್ನು ಸಂಪರ್ಕಿಸಿ.**

**ಪ್ರಾಂಶುಪಾಲರು**
**ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ**
**ಮಂತ್ರಾಲಯ – 518 345, ಜಿಲ್ಲಾ : ಕರ್ನೂಲು, ಎ.ಪಿ.**
**ದೂರವಾಣಿ : 08512–279529 ಮತ್ತು 09985356744**



## ನವಬೃಂದಾವನಗಡ್ಡೆಯಲ್ಲಿ ಶ್ರೀವಾಗೀಶತೀರ್ಥರ ಆರಾಧನೆ

ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೂರ್ವೀಕರಾದ ಶ್ರೀವಾಗೀಶತೀರ್ಥರ ಆರಾಧನೆಯನ್ನು ಉಭಯ ಶ್ರೀಪಾದಂಗಳವರು ನವವೃಂದಾವನಗಡ್ಡೆಯಲ್ಲಿ ದಿನಾಂಕ ೫ ಮತ್ತು ೬ ನೇ ಏಪ್ರಿಲ್ ೨೦೦೭ ರಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಶ್ರೀಮಠದ ಪೂರ್ವೀಕರಾದ ಶ್ರೀಪದ್ಮನಾಭ-ತೀರ್ಥರೇ ಮೊದಲಾದ ಎಲ್ಲ ಬೃಂದಾವನಗಳಿಗೂ ಪಂಚಾಮೃತಾಭಿಷೇಕ ಹಾಗೂ ಹಸ್ತೋದಕವನ್ನು ನೆರವೇರಿಸಿ ಮಹಾಮಂಗಳಾರತಿಯನ್ನು ಮಾಡಲಾಯಿತು. ಶ್ರೀಮಠದ ವಿದ್ವಾಂಸರುಗಳಿಂದ ಉಪನ್ಯಾಸ, ಪ್ರವಚನಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಅಧಿಕ ಸಂಖ್ಯೆ-ಯಲ್ಲಿ ನೆರೆದಿದ್ದ ಶಿಷ್ಯರಿಗೆ, ಭಕ್ತರಿಗೆ ತೀರ್ಥಪ್ರಸಾದದ ವ್ಯವಸ್ಥೆಯನ್ನು ಶ್ರೀಮಠವು ಮಾಡಿತ್ತು. ಸಂಜೆ ಶ್ರೀಕವೀಂದ್ರತೀರ್ಥ ಪ್ರಶಸ್ತಿ ಹಾಗೂ ಶ್ರೀವಾಗೀಶತೀರ್ಥ ಪ್ರಶಸ್ತಿಯನ್ನು ವಿದ್ವಾಂಸರಿಗೆ ಪ್ರದಾನ ಮಾಡಲಾಯಿತು.

## ನವವೃಂದಾವನಗಡ್ಡೆಯಲ್ಲಿ 'ಶ್ರೀಕವೀಂದ್ರತೀರ್ಥ ಪ್ರಶಸ್ತಿ' ಪ್ರದಾನ

ಪ್ರತಿ ಸಂವತ್ಸರವೂ ಶ್ರೀಮಠದಿಂದ ನೀಡಲ್ಪಡುವ 'ಶ್ರೀಕವೀಂದ್ರತೀರ್ಥ ಪ್ರಶಸ್ತಿ'ಯನ್ನು ದಿನಾಂಕ ೨೭ ಮಾರ್ಚ್ ೨೦೦೭ ರಂದು ಶ್ರೀಮಠದ ಹಿರಿಯರೂ, ವಿದ್ವಾಂಸರೂ ಆದ ವಿದ್ವಾನ್. ಗುಂಜಳ್ಳಿ ಧೀರೇಂದ್ರಾಚಾರ್ಯರಿಗೆ ಉಭಯ ಶ್ರೀಪಾದಂಗಳವರು ಪ್ರದಾನ ಮಾಡಿದರು. ಪ್ರಶಸ್ತಿಯು ಐದು ಸಾವಿರ ರೂ. ನಗದು, ಬೆಳ್ಳಿಯ ಕುಂಭ, ಶಾಲು ಮತ್ತು ಅಭಿನಂದನಾಪತ್ರಗಳನ್ನು ಒಳಗೊಂಡಿತ್ತು.

## ಶ್ರೀಪದ್ಮನಾಭತೀರ್ಥರ ಸನ್ನಿಧಾನದಲ್ಲಿ 'ಶ್ರೀವಾಗೀಶತೀರ್ಥ ಪ್ರಶಸ್ತಿ' ಪ್ರದಾನ

ಪ್ರತಿಸಂವತ್ಸರವೂ ಶ್ರೀಮಠದಿಂದ ನೀಡಲ್ಪಡುವ 'ಶ್ರೀವಾಗೀಶತೀರ್ಥ ಪ್ರಶಸ್ತಿ'ಯನ್ನು ದಿನಾಂಕ ೬ ಏಪ್ರಿಲ್ ೨೦೦೭ ರಂದು ಶ್ರೀಮಠದ ಶಿಷ್ಯರೂ, ಶ್ರೀಪೂರ್ಣಪ್ರಜ್ಞ ವಿದ್ಯಾಪೀಠದ ಅಧ್ಯಾಪಕರೂ ಆದ ವಿದ್ವಾನ್. ಗುರುಪ್ರಸಾದಾಚಾರ್ಯರಿಗೆ ಉಭಯ ಶ್ರೀಪಾದಂಗಳವರು ನವಬೃಂದಾವನಗಡ್ಡೆಯ ಶ್ರೀಪದ್ಮನಾಭತೀರ್ಥರ ಬೃಂದಾವನದ ಮುಂಭಾಗದಲ್ಲಿ ಪ್ರದಾನ ಮಾಡಿದರು. ಪ್ರಶಸ್ತಿಯು ಐದು ಸಾವಿರ ರೂ. ನಗದು, ಬೆಳ್ಳಿಯ ಕುಂಭ, ಶಾಲು ಮತ್ತು ಅಭಿನಂದನಾಪತ್ರಗಳನ್ನು ಒಳಗೊಂಡಿತ್ತು. ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಆಚಾರ್ಯರು ಶ್ರೀಮಠದ ಅನೇಕ ಕಾರ್ಯಕ್ರಮಗಳನ್ನು ಪ್ರಶಂಸಿಸಿ ತಮ್ಮನ್ನು ಈ ಪ್ರಶಸ್ತಿಗೆ ಪರಿಗಣಿಸಿದ್ದಕ್ಕಾಗಿ ಉಭಯ ಶ್ರೀಪಾದಂಗಳವರಲ್ಲಿ ಭಕ್ತಿಸಮರ್ಪಣೆಯನ್ನು ಮಾಡಿ ಉಪನ್ಯಾಸವನ್ನು ಮಾಡಿದರು.

**ವರದಿ : ಸೂರೀಂದ್ರ**